ಕರ್ನಾಟಕ ವಿಧಾನಸಭೆ

ಸೋಮವಾರ 14ನೇ ಜೂನ್ 2004ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು: (ಶ್ರೀ ಕೃಷ್ಣರವರು) ಪೀಠವನ್ನು ಅಲಂಕರಿಸಿದ್ದರು

1) ಈಗ ಪ್ರಮಾಣ ವಚನ ಸ್ವೀಕಾರ:

(ಅ) ಶ್ರೀ ಡಿ. ನಾಗರಾಜಯ್ಯ (ಹುಲಿಯೂರುದುರ್ಗ):– "ಡಿ. ನಾಗರಾಜಯ್ಯ ಎಂಬ ಹೆಸರಿನವನಾದ ನಾನು ವಿಧಾನ ಸಭೆಯ ಸದಸ್ಯನಾಗಿ ನಿರ್ವಾಚನ ಹೊಂದಿದವನಾಗಿ ವಿಧಿದ್ವಾರಾ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ."

(ಆ) ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ):– "ವಿಜಯ ಲಕ್ಷ್ಮಮ್ಮ ಎಂಬ ಹೆಸರಿನವಳಾದ ನಾನು ವಿಧಾನ ಸಭೆಯ ಸದಸ್ಯಳಾಗಿ ನಿರ್ವಾಚನ ಹೊಂದಿದವಳಾಗಿ ವಿಧಿದ್ವಾರಾ ಸ್ಥಾಪಿತವಾದ ಭಾರತದ ಸಂವಿಧಾನದ ವಿಷಯದಲ್ಲಿ ಶ್ರದ್ಧೆಯಿಂದಲೂ, ನಿಷ್ಠೆಯಿಂದಲೂ ಕೂಡಿರುತ್ತೇನೆಂದೂ, ನಾನು ಭಾರತದ ಪರಮಾಧಿಕಾರವನ್ನು ಮತ್ತು ಸಮಗ್ರತೆಯನ್ನು ಸಮರ್ಥಿಸುತ್ತೇನೆಂದೂ, ನಾನು ಈಗ ಕೈಗೊಳ್ಳಲಿರುವ ಕರ್ತವ್ಯವನ್ನು ಶ್ರದ್ಧಾಪೂರ್ವಕವಾಗಿ ನಿರ್ವಹಿಸುತ್ತೇನೆಂದೂ ಭಗವಂತನ ಹೆಸರಿನ ಮೇಲೆ ಪ್ರಮಾಣ ಮಾಡುತ್ತೇನೆ ಹಾಗೂ ಸತ್ಯ ನಿಷ್ಠೆಯಿಂದ ಪ್ರತಿಜ್ಞೆ ಮಾಡುತ್ತೇನೆ."

2. ಸಂತಾಪ ಸೂಚನೆಗಳು

ಅಧ್ಯಕ್ಷರು:– ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಜಿ. ರಾಜುಗೌಡ, ಶ್ರೀ ಡಿ.ಬಿ. ಕಲ್ಮಣ್‌ಕರ್, ಶ್ರೀ ಪಿ. ವೆಂಕಟರಮಣ ಮತ್ತು ಮಾಜಿ ಸದಸ್ಯರಾದ ಶ್ರೀ ಎನ್. ಗಂಗಾಧರ್ ಅವರುಗಳು ನಿಧನರಾಗಿರುವುದನ್ನು ವಿಷಾದದಿಂದ ಸದನಕ್ಕೆ ತಿಳಿಸ ಬಯಸುತ್ತೇನೆ.

1. ಶ್ರೀ ಜಿ. ರಾಜುಗೌಡ

ವಿಧಾನಸಭೆಯ ಮಾಜಿ ಸದಸ್ಯರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಜಿ. ರಾಜುಗೌಡ ಅವರು ದಿನಾಂಕ 16ನೇ ಮೇ, 1932ರಲ್ಲಿ ದೊಡ್ಡಿಂದುವಾಡಿ ಗ್ರಾಮದಲ್ಲಿ ಜನಿಸಿದರು. ವೃತ್ತಿಯಲ್ಲಿ ಕೃಷಿಕರಾದ ಶ್ರೀಯುತರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ, ತಾಲ್ಲೂಕು ಬೋರ್ಡ್ ಸದಸ್ಯರಾಗಿ, ಪಿ.ಎಲ್.ಡಿ. ಬ್ಯಾಂಕ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಅತ್ಯುತ್ತಮ ಆಡಳಿತಗಾರರಾಗಿದ್ದ ಶ್ರೀಯುತರು 1968ರಲ್ಲಿ ಅಂದಿನ ಪ್ರಧಾನ ಮಂತ್ರಿ ಇಂದಿರಾಗಾಂಧಿ ಅವರಿಂದ "ಅತ್ಯುತ್ತಮ ಮಂಡಳಿ ಪಂಚಾಯಿತಿ ಪ್ರಧಾನ" ಎಂಬ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು. ಶ್ರೀಯುತರು 6ನೇ, 8ನೇ, 9ನೇ ಹಾಗೂ 11ನೇ ವಿಧಾನ ಸಭೆಗಳಿಗೆ ಹನೂರು ಕ್ಷೇತ್ರದಿಂದ ಚುನಾಯಿತರಾಗಿದ್ದರು ಹಾಗೂ 11ನೇ ವಿಧಾನ

ಸಭೆಯಲ್ಲಿ ಶ್ರೀ ಎಸ್.ಎಂ. ಕೃಷ್ಣ ಅವರ ಮಂತ್ರಿಮಂಡಲದಲ್ಲಿ ಕೃಷಿ ಸಂಸ್ಕರಣಾ ಸಚಿವರಾಗಿಯೂ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 25–3–2004 ರಂದು ನಿಧನ ಹೊಂದಿದರು.

2. ಶ್ರೀ ಡಿ.ಬಿ. ಕಲ್ಯಾಣ್‌ಕರ್

ವಿಧಾನ ಸಭೆಯ ಮಾಜಿ ಸದಸ್ಯರು, ಮಾಜಿ ಸಚಿವರು ಹಾಗೂ ವಿಧಾನ ಪರಿಷತ್ತಿನ ಮಾಜಿ ಸಭಾಪತಿಯವರಾದ ಶ್ರೀ ಡಿ.ಬಿ. ಕಲ್ಯಾಣ್‌ಕರ್ ರವರು 7ನೇ ಮೇ, 1927ರಲ್ಲಿ ಜನಿಸಿದರು. ಕಾನೂನು ಪದವೀಧರರಾದ ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದರು. ಕಾನೂನು ಪದವಿಯನ್ನು ಪೂರ್ಣಗೊಳಿಸಿದ ನಂತರ ಲೋಕೋಪಯೋಗಿ ಹಾಗೂ ಅಬಕಾರಿ ಇಲಾಖೆಗಳಲ್ಲಿ ಸ್ವಲ್ಪ ಕಾಲ ಕಾರ್ಯನಿರ್ವಹಿಸಿ, ಹೈದರಾಬಾದ್ ನ್ಯಾಯವಾದಿಗಳ ಸಂಘದ ಸದಸ್ಯರಾಗಿ ಹಾಗೂ ಆಳಂದ ನ್ಯಾಯಾಲಯದಲ್ಲಿ ನ್ಯಾಯವಾದಿಯಾಗಿ ಸೇವೆ ಸಲ್ಲಿಸಿದ್ದರು. 1947ರಲ್ಲಿ ಹೈದರಾಬಾದ್ ವಿಮೋಚನಾ ಚಳುವಳಿಯಲ್ಲಿ ಭಾಗವಹಿಸಿ, 9ನೇ ಆಗಸ್ಟ್, 1947 ರಿಂದ 9ನೇ ಅಕ್ಟೋಬರ್ 1947ರ ವರೆಗೆ ಬಂಧನದಲ್ಲಿದ್ದರು. ಅಕ್ಟೋಬರ್ 1947 ರಿಂದ ಮಾರ್ಚ್ 1948ರ ವರೆಗೆ ಹೈದರಾಬಾದ್ ರಾಜ್ಯ ಕಾಂಗ್ರೆಸ್ ಕಾರ್ಯಕರ್ತರಾಗಿ ಸೇವೆ ಸಲ್ಲಿಸಿದ್ದರು. 1960ರಲ್ಲಿ ಆಳಂದ ಪುರಸಭೆಗೆ ಆಯ್ಕೆಯಾಗಿ ರಕ್ಷಣಾ ನಿಧಿ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. 1967ರಲ್ಲಿ ಪ್ರಜಾ ಸೋಶಿಯಲಿಸ್ಟ್ ಪಕ್ಷದಿಂದ ಮೊದಲನೇ ಬಾರಿ ವಿಧಾನಸಭೆಗೆ ಚುನಾಯಿತರಾದರು. 1971ರಲ್ಲಿ ದಿವಂಗತ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ಪ್ರಜಾ ಸೋಶಿಯಲಿಸ್ಟ್ ಪಕ್ಷವನ್ನು ಕಾಂಗ್ರೆಸ್‌ನೊಂದಿಗೆ ವಿಲೀನಗೊಳಿಸಿದರು. ತದನಂತರ 1972ರಲ್ಲಿ 3ನೇ ವಿಧಾನ ಸಭೆಗೆ ಅಫಲಜಪುರ ಮತ ಕ್ಷೇತ್ರದಿಂದ ಪುನರ್ ಆಯ್ಕೆಯಾಗಿ, ವಿಧಾನ ಸಭೆಯ ಸರ್ಕಾರಿ ಮುಖ್ಯ ಸಚೇತಕರಾಗಿ ಮತ್ತು ದೇವರಾಜ ಅರಸು ಸಂಪುಟದಲ್ಲಿ ಅಬಕಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದರು. 1978ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡು, ಎರಡನೇ ಅವಧಿಗೂ ಕೂಡ ಸದರಿ ಹುದ್ದೆಯಲ್ಲಿ ಮುಂದುವರೆದು, ನಂತರ ಪಕ್ಷದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕರ್ನಾಟಕ ವಿಶ್ವವಿದ್ಯಾನಿಲಯದ ಡಾ: ಎಸ್.ಎಸ್. ಅಡಕ್ ಸಮಿತಿ ಸದಸ್ಯರಾಗಿ, ಆದರ್ಶ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

1982, 1988 ಹಾಗೂ 1994ರಲ್ಲಿ ಮೂರು ಅವಧಿಗೆ ವಿಧಾನ ಪರಿಷತ್ತಿಗೆ ಸದಸ್ಯರಾಗಿ ಶ್ರೀಯುತರು ಜನವರಿ 1993 ರಿಂದ 2000ದ ವರೆಗೆ ಎರಡು ಬಾರಿ ವಿಧಾನ ಪರಿಷತ್ತಿನ ಸಭಾಪತಿಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು ಅವರ ಅಧಿಕಾರಾವಧಿಯಲ್ಲಿ ಹಲವಾರು ಬಾರಿ ವಿದೇಶ ಪ್ರವಾಸವನ್ನು ಕೈಗೊಂಡಿದ್ದರು.

ಶ್ರೀಯುತರು ದಿನಾಂಕ 6–5–2004 ರಂದು ನಿಧನ ಹೊಂದಿದರು.

3. ಶ್ರೀ ಪಿ. ವೆಂಕಟರಮಣ

ವಿಧಾನ ಸಭೆಯ ಮಾಜಿ ಸದಸ್ಯರು, ವಿಧಾನ ಸಭೆಯ ಮಾಜಿ ಸಭಾಧ್ಯಕ್ಷರು ಹಾಗೂ ಮಾಜಿ ಸಚಿವರಾಗಿದ್ದ ಶ್ರೀ ಪಿ. ವೆಂಕಟರಮಣ, ಅವರು ದಿನಾಂಕ 24ನೇ ಅಕ್ಟೋಬರ್, 1923 ರಂದು ನಂಜನಗೂಡು ತಾಲ್ಲೂಕಿನ ಹೆಜ್ಜಿಗೆ ಗ್ರಾಮದಲ್ಲಿ ಜನಿಸಿದ್ದು, ಕಾನೂನು ಪದವೀಧರರಾಗಿದ್ದರು.

ಶ್ರೀಯುತರು ವಿದ್ಯಾರ್ಥಿ ಜೀವನದಲ್ಲಿಯೇ 1942ರಲ್ಲಿ ನಡೆದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ನಂಜನಗೂಡು ತಾಲ್ಲೂಕಿನ ಹರಿಜನ ಹಿಲ್ ಟ್ರೈಬ್ಸ್ ವಸತಿ ನಿಲಯ ಸಂಸ್ಥಾಪಕರಾಗಿ, ನಂಜನಗೂಡು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ, ಮೈಸೂರು ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಸದಸ್ಯರಾಗಿ, ಕರ್ನಾಟಕ ರಾಜ್ಯ ಗೃಹ ಮಂಡಳಿ ಅಧ್ಯಕ್ಷರಾಗಿ, 1970 ರಿಂದ 1978ರ ಅವಧಿಯಲ್ಲಿ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು ಹಾಗೂ ಹರಿಜನ ಗಿರಿಜನ ಏಳ್ಗೆಗಾಗಿ ಸಕ್ರಿಯವಾಗಿ ಭಾಗವಹಿಸಿದ್ದರು. ಶ್ರೀಯುತರು 6ನೇ ವಿಧಾನ ಸಭೆಗೆ ಟಿ. ನರಸೀಪುರ ಕ್ಷೇತ್ರದಿಂದ ಆಯ್ಕೆಯಾಗಿ, 1978ರಲ್ಲಿ ಸಭಾಧ್ಯಕ್ಷರಾಗಿ ಹಾಗೂ 1980ರಲ್ಲಿ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಂಪುಟ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 11–6–2004 ರಂದು ನಿಧನ ಹೊಂದಿದರು.

4. ಶ್ರೀ ಎನ್. ಗಂಗಾಧರ್

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎನ್. ಗಂಗಾಧರ್, ಅವರು ದಿನಾಂಕ 5ನೇ ಮಾರ್ಚ್, 1936ರಲ್ಲಿ ಹಿರಿಸಾವೆ ಗ್ರಾಮದಲ್ಲಿ ಜನಿಸಿದರು. ವೃತ್ತಿಯಲ್ಲಿ ಭಾರತೀಯ ಜೀವ ವಿಮೆಯ ಪ್ರತಿನಿಧಿಯಾದ ಶ್ರೀಯುತರು ಸಮಾಜ ಸೇವೆಯಲ್ಲಿ ಆಸಕ್ತಿ ಹೊಂದಿದ್ದರು. ಹಿರಿಸಾವೆ ಸಹಕಾರ ಸಂಘದ ಮತ್ತು ಹೇಮಾವತಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರು 8ನೇ ವಿಧಾನ ಸಭೆಗೆ ಶ್ರವಣಬೆಳಗೊಳ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಶ್ರೀಯುತರು ದಿನಾಂಕ 5–4–2004ರಂದು ನಿಧನ ಹೊಂದಿದರು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಧ್ಯಕ್ಷರೇ, ಹುಬ್ಬಳ್ಳಿ ಸಹರಿನ ಶಾಸಕರು ಎಂ.ಜಿ. ಜರತಾರಘರ್ ಅವರು 1978ರಲ್ಲಿ ಮತ್ತು 1983ರಲ್ಲಿ ಈ ಮನೆಯ ಸದಸ್ಯರಾಗಿದ್ದರು. ಅವರು ಮೊನ್ನೆ 11–6–2004 ರಂದು ದೈವಾಧೀನರಾಗಿದ್ದಾರೆ. ಏಕೋ ಏನೋ ಮಾಹಿತಿಯನ್ನು ತರಿಸಿಕೊಂಡಿಲ್ಲ.

ಅಧ್ಯಕ್ಷರು:– ಆ ಮಾಹಿತಿಗಳನ್ನು ಸಂಗ್ರಹ ಮಾಡಿ ನಾಳೇನೆ ಸಭೆಯಲ್ಲಿ ಸಂತಾಪ ಸೂಚನೆಯನ್ನು ಮಂಡಿಸುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇನೆ.

+ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು):– ಮಾನ್ಯ ಸಭಾಧ್ಯಕ್ಷರೇ, ತಾವು ಈಗಾಗಲೇ ಮಂಡಿಸಿರುವ ಸಂತಾಪ ಸೂಚನೆಗೆ ನಾನು ಅದನ್ನು ಸಮರ್ಥಿಸುತ್ತಾ ಮಾಜಿ ವಿಧಾನಸಭೆಯ ಅಧ್ಯಕ್ಷರಾದ ಶ್ರೀ ಪಿ. ವೆಂಕಟರಮಣ ಅವರು ಮೊನ್ನೆ ಶುಕ್ರವಾರದ ದಿವಸ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ಮನೆಗೆ ಕೂಡ ನಾನು ಹೋಗಿ ಶ್ರದ್ಧಾಂಜಲಿಯಲ್ಲಿ ಕೂಡ ಅರ್ಪಣೆ ಮಾಡಿದ್ದೇನೆ. ಕಾಂಗ್ರೆಸ್ ಪಕ್ಷವು 1968ರಲ್ಲಿ ಇಬ್ಭಾಗವಾದ ಮೇಲೆ ಶ್ರೀ ಪಿ. ವೆಂಕಟರಮಣ ಅವರು ದಿವಂಗತ ದೇವರಾಜ ಅರಸ್‌ರವರ ನೇತೃತ್ವದಲ್ಲಿ ಪಕ್ಷದ ಒಬ್ಬ ನಾಯಕರಾಗಿ ಅವರು ಕೆಲಸವನ್ನು ಮಾಡಿದ್ದಾರೆ. ಮತ್ತು ಮಂತ್ರಿಗಳಾಗಿ ವಿಶೇಷವಾಗಿ ಸಮಾಜಕಲ್ಯಾಣ ಇಲಾಖೆಯ ಮಂತ್ರಿಯಾಗಿ ಈ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರ ಬಗ್ಗೆ ಸಾಕಷ್ಟು ಕೆಲಸಕಾರ್ಯಗಳನ್ನೂ ಕೂಡ ಮಾಡಿದ್ದಾರೆ. ಅವರು ಹೌಸ್ ಬಿಲ್ಡಿಂಗ್‌ನ ಅಧ್ಯಕ್ಷರಾಗಿ ಕೂಡ ಕೆಲಸವನ್ನು ಮಾಡಿದ್ದಾರೆ. ದಿವಂಗತ

ದೇವರಾಜ ಅರಸ್‌ರವರು ಮುಖ್ಯಮಂತ್ರಿಯಾದಾಗ ಅವರು ವಿಧಾನಸಭೆಯ ಅಧ್ಯಕ್ಷರಾಗಿ ಕೂಡ ಕೆಲಸವನ್ನು ಮಾಡಿದ್ದಾರೆ. ಇವತ್ತು ದೀನದಲಿತರ ಒಬ್ಬ ಮುಖಂಡನನ್ನು ಕಳೆದುಕೊಂಡಂತಾಗಿದೆ. ಬಹಳಷ್ಟು ಅವರು ಯಾವಾಗಲೂ ಕೂಡ ರಾಜಕೀಯ ವ್ಯವಹಾರಗಳ ಬಗ್ಗೆ ಕಳಕಳಿಯನ್ನು ಇಟ್ಟು ಸಾಕಷ್ಟು ಸಲ ನನ್ನ ಜೊತೆಗೆ ಮಾತನಾಡತಕ್ಕಂಥದ್ದು ಅವರ ಏನು ನಡವಳಿಕೆ ಇತ್ತು. ಬಹಳಷ್ಟು ಕೂಡ ಚಿಂತನೆಯನ್ನು ಮಾಡತಕ್ಕ ಮಹಾನ್ ವ್ಯಕ್ತಿ. ವಿಧಾನಸಭೆಯ ಅಧ್ಯಕ್ಷರಾಗಿ ಕೂಡ ಬಹಳ ಸಮರ್ಪಣಾಭಾವದಿಂದ ಅವರು ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಅವರ ಅಗಲಿಕೆಯಿಂದ ನಮಗೆ ಬಹಳ ದುಃಖವಾಗಿದೆ.

ದಿವಂಗತ ಶ್ರೀ ಡಿ.ಬಿ. ಕಲ್ಖಣ್‌ಕರ್‌ರವರು ಆಗಿನ ಕಾಲದಲ್ಲಿ ಹೈದರಾಬಾದ್–ಕರ್ನಾಟಕದ ವಿವೋಚನಾ ಚಳುವಳಿ ಏನು ಇತ್ತು, ಅವರು ಅದರ ಮುಂದಾಳತ್ವವನ್ನು ವಹಿಸಿದ್ದರು. ಮತ್ತೆ ಯಾವಾಗಲೂ ಕೂಡ ಬಹಳ vocal ಆಗಿ ಸಮಸ್ಯೆಗಳ ಬಗ್ಗೆ ಪ್ರತಿಪಾದನೆ ಮಾಡತಕ್ಕಂಥ, ಶಕ್ತಿಸಾಮರ್ಥ್ಯ ಉಳ್ಳಂಥ ಒಬ್ಬ ವ್ಯಕ್ತಿಯಾಗಿದ್ದರು. ಹೈದರಾಬಾದ್–ಕರ್ನಾಟಕ ಭಾಗದ ಒಬ್ಬ ನೇತಾರರಾಗಿ ವಿಧಾನ ಪರಿಷತ್‌ನಲ್ಲಿ, ವಿಧಾನಸಭೆಯಲ್ಲಿ ದೇವರಾಜ್ ಅರಸ್‌ರವರ ಕಾಲದಲ್ಲಿ ಮಂತ್ರಿಗಳಾಗಿ ಕೂಡ ಅವರು ಕೆಲಸವನ್ನು ಮಾಡಿದ್ದಾರೆ. ವಿಧಾನ ಪರಿಷತ್ತಿನ ಸಭಾಪತಿಗಳಾಗಿ ಕೂಡ ಅವರು ಕೆಲಸವನ್ನು ಮಾಡಿದ್ದಾರೆ. ಬಹಳ ದಿವಸಗಳಿಂದ ಅವರ ಆರೋಗ್ಯ ಸರಿಯಾಗಿರಲಿಲ್ಲ. ದೇಶದ ಮಾಜಿ ಪ್ರಧಾನಿಯಾದಂಥ ಶ್ರೀ ಪಿ.ವಿ. ನರಸಿಂಹರಾವ್ ಜೊತೆಯಲ್ಲಿ ಕೂಡ ಅವರು ಕೆಲಸವನ್ನು ಮಾಡಿದ್ದಾರೆ. ಮತ್ತೆ ನಮ್ಮೆ ಭಾಗದ ಇವತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಾಗಲಿ, ಮಾನ್ಯ ತಂಗಾರವರಾಗಲಿ ಏನೊಂದು ಆ ಭಾಗದ ಅಭಿವೃದ್ಧಿ ಬಗ್ಗೆ ಕೆಲಸ ಮಾಡತಕ್ಕ ವಿಶೇಷವಾದ ಒಂದು ಭಾವನೆ ಅವರಲ್ಲಿತ್ತು. ಸುಭಾಷ್ ಚಂದ್ರಬೋಸ್‌ರವರ ಒಂದು ಸಂಸ್ಥೆಯ ಅಧ್ಯಕ್ಷರೂ ಕೂಡ ಆಗಿದ್ದರು. ಅವರು ಬಹಳಷ್ಟು ಕೆಲಸವನ್ನು ಮಾಡಿದ್ದಾರೆ. ಅವರ ಅಗಲಿಕೆಯಿಂದ ರಾಜ್ಯಕ್ಕೆ ಮತ್ತು ವಿಶೇಷವಾಗಿ ಹೈದರಾಬಾದ್–ಕರ್ನಾಟಕ ಭಾಗದ ಜನತೆಗೆ ಇವತ್ತು ಬಹಳಷ್ಟು ತುಂಬಲಾರದ ನಷ್ಟವುಂಟಾಗಿದೆ ಎನ್ನುವಂಥ ಮಾತನ್ನು ಹೇಳುತ್ತಿದ್ದೇನೆ.

ಮಾನ್ಯ ರಾಜುಗೌಡರು ನಮ್ಮ ಜೊತೆಗಿದ್ದರು. ಅವರೂ ಕೂಡ ಮಂತ್ರಿಗಳಾಗಿ ಕೆಲಸವನ್ನು ಮಾಡಿದ್ದಾರೆ. ಅವರು ಬಹಳ ನಮ್ರ ಸ್ವಭಾವದ ವ್ಯಕ್ತಿ. ಅವರೂ ಕೂಡ ಮೈಸೂರು ಜಿಲ್ಲೆಯಲ್ಲಿ ಸಾಕಷ್ಟು ಕೆಲಸಕಾರ್ಯಗಳನ್ನು ಮಾಡಿದ್ದಾರೆ. ಅವರೂ ಕೂಡ ನಮ್ಮನ್ನು ಅಗಲಿ ಹೋಗಿದ್ದಾರೆ. ಅವರ ಅಗಲಿಕೆಯಿಂದ ನಮ್ಮ ಮನಸ್ಸಿಗೆ ನೋವಾಗಿದೆ.

ಮಾನ್ಯ ಗಂಗಾಧರ್‌ರವರೂ ಕೂಡ ಹಾಸನ ಜಿಲ್ಲೆಯಿಂದ ಬಂದಿದ್ದರು. ಮತ್ತೆ ಅವರು ರಾಜಕಾರಣ ಮತ್ತು ಸಮಾಜಸೇವೆಯಲ್ಲಿ ಕೂಡ ಅವರು ಕೆಲಸ ಕಾರ್ಯಗಳನ್ನು ಮಾಡಿದ್ದಾರೆ.

ದೊಡ್ಡೇರಿ ವೆಂಕಟಗಿರಿಗೌಡರು ಕೂಡ ಇವತ್ತು ಅಂತರರಾಷ್ಟ್ರೀಯ ಖ್ಯಾನ ಛಾಯಗ್ರಾಹಕ ಮತ್ತು ಖ್ಯಾತ ವೈದ್ಯರು ಮತ್ತು ಸಾಹಿತಿಗಳೂ ಆದ ದೊಡ್ಡೇರಿಯವರು ಕೂಡ ನಮ್ಮನ್ನು ಅಗಲಿ ಹೋಗಿದ್ದಾರೆ. ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಕೂಡ ಅವರು ಸಾಹಿತ್ಯಕ್ಕೆ ಒಂದು ವಿಶೇಷವಾದ ಹೆಸರನ್ನು ತರತಕ್ಕ ರೀತಿಯಲ್ಲಿ ಕೆಲಸವನ್ನು ಮಾಡಿದ್ದಾರೆ.

ಶ್ರೀಮತಿ ಸೌಂದರ್ಯ ಅವರು ಕನ್ನಡ ಚಿತ್ರರಂಗದ ಖ್ಯಾತ ನಟಿಯಾಗಿ ಕೆಲಸವನ್ನು ಮಾಡಿದ್ದಾರೆ. ಆಗ ಚುನಾವಣೆ ನಡೆಯುತ್ತಿತ್ತು. ನಾವೆಲ್ಲರೂ ಕೂಡ ಪ್ರಚಾರದಲ್ಲಿ ನಿರತರಾಗಿದ್ದೆವು. ಆಗ ನಮಗೆ ಸೌಂದರ್ಯ ಅವರು ಆಂಧ್ರಪ್ರದೇಶಕ್ಕೆ ಹೋಗತಕ್ಕ ಕಾಲದಲ್ಲಿ ತಮ್ಮ ತಮ್ಮನೊಡನೆ ಅವರು ಅಗಲಿದ್ದಾರೆ ಎನ್ನತಕ್ಕಂಥ ಏನು ಸಮಾಚಾರ ಕೇವಲ ಕರ್ನಾಟಕಕ್ಕೆ ಸೀಮಿತವಾಗಿರಲಾರದೆ ಕರ್ನಾಟಕ, ಆಂಧ್ರಪ್ರದೇಶ ಚಲನಚಿತ್ರದ ಜಗತ್ತಿನಲ್ಲಿ ಮತ್ತು ಕರ್ನಾಟಕ ಜನತೆಯ ಅವರ ಅಭಿಮಾನಿಗಳಲ್ಲಿ ಕೂಡ ಬಹಳ ಅತೀವ ದುಃಖವನ್ನುಂಟು ಮಾಡಿದೆ. ಬಹಳ ಕಡಿಮೆ ವಯಸ್ಸಿನಲ್ಲಿ ಅವರು ಚಿತ್ರರಂಗದ ಜಗತ್ತಿನಲ್ಲಿ ಕೆಲಸ ಕಾರ್ಯಗಳನ್ನು ಮಾಡಿದ್ದಾರೆ. ಅವರ ಅಗಲಿಕೆಯಿಂದ ನಾವು ಮೌನವನ್ನು ಕೂಡ ಹೇಳುತ್ತಿದ್ದೇವೆ. ಈ ರೀತಿಯಾಗಿ ಇವತ್ತು ಯಾರು ನಮ್ಮಿಂದ ಅಗಲಿ ಹೋದಂಥ ಜನರ ಸಂತಾಪಸೂಚನೆಯನ್ನು ತಾವೇನು ಮಂಡಿಸಿದ್ದೀರಿ, ಅದಕ್ಕೆ ಸದನದ ಪರವಾಗಿ ನಾನೂ ಕೂಡ ಭಾಗಿಯಾಗಿದ್ದೇನೆ ಎನ್ನುವ ಮಾತನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು):– ಮಾನ್ಯ ಸಭಾಧ್ಯಕ್ಷರೇ, ತಾವೇನು ಇವತ್ತು ಸಂತಾಪ ಸೂಚನೆಯನ್ನು ಮಂಡನೆಯನ್ನು ಮಾಡಿದ್ದೀರಿ, ಸನ್ಮಾನ್ಯ ಮುಖ್ಯ ಮಂತ್ರಿಗಳು ಏನು ಈವರೆಗೆ ಮಾತನಾಡಿದ್ದಾರೆ, ಅದಕ್ಕೆ ಧ್ವನಿಗೂಡಿಸುತ್ತಾ ವಿಧಾನ ಸಭೆಯ ಮಾಜಿ ಸದಸ್ಯರೂ ಆಗಿ ಮಾಜಿ ಸಚಿವರೂ ಆದಂಥ ಶ್ರೀಮಾನ್ ರಾಜುಗೌಡರು, ಶ್ರೀ ಡಿ.ಬಿ. ಕಲ್ಮಣ್‌ಕರ್ ರವರು, ಶ್ರೀ ಪಿ. ವೆಂಕಟರಮಣ ಅವರು, ಶ್ರೀ ಎನ್. ಗಂಗಾಧರ್‌ರವರು, ಇವತ್ತು ನಮ್ಮನ್ನು ಅಗಲಿ ಹೋಗಿದ್ದಾರೆ. ವಿಶೇಷವಾಗಿ ಕಲ್ಮಣ್‌ಕರ್ ಅವರನ್ನು ಅವರು ಸಭಾಪತಿಗಳಾಗಿದ್ದಾಗ ಕೆಲಸ ಮಾಡತಕ್ಕ ಸುಯೋಗ ನನಗೆ ಸಿಕ್ಕಿತ್ತು. ಅವರು ಒಬ್ಬ ಆದರ್ಶ ವ್ಯಕ್ತಿ. ಹೈದರಾಬಾದ್–ಕರ್ನಾಟಕದ ಅಭಿವೃದ್ಧಿಗಾಗಿ ಶಕ್ತಿಮೀರಿ ದುಡಿದಂಥ ಒಬ್ಬ ಹಿರಿಯ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಅದೇ ರೀತಿ ಶ್ರೀ ಪಿ. ವೆಂಕಟರಮಣ ಅವರು ಇಲ್ಲಿ ತಮ್ಮದೇ ಆದಂಥ ಛಾಪನ್ನು ಒತ್ತಿ ಸಭಾಧ್ಯಕ್ಷರಾಗಿ ಕೆಲಸ ಮಾಡಿದ್ದನ್ನು ಇವತ್ತಿಗೂ ಸಹಾ ಎಲ್ಲರೂ ನೆನಪು ಮಾಡಿಕೊಳ್ಳುತ್ತಿದ್ದಾರೆ. ಆ ರೀತಿಯ ಒಂದು ಮೇಲ್ಪಂಕ್ತಿಯನ್ನು ಹಾಕಿ ಸದನವನ್ನು ನಡೆಸುವುದರಲ್ಲಿ ಅವರು ಯಶಸ್ವಿಯಾಗಿದ್ದರು, ಅದೇ ರೀತಿ ಸನ್ಮಾನ್ಯ ದಿವಂಗತ ಗಂಗಾಧರ್‌ರವರು ಬಹಳ ಒಳ್ಳೆಯ ಕೆಲಸವನ್ನು ಮಾಡಿದಂಥ ಶ್ರವಣಬೆಳಗೊಳ ಕ್ಷೇತ್ರದಿಂದ ಆಯ್ಕೆಯಾದಂಥ ವ್ಯಕ್ತಿ ಸಹಾ ಇವತ್ತು ನಮ್ಮನ್ನು ಅಗಲಿದ್ದಾರೆ. ಸನ್ಮಾನ್ಯ ಮುಖ್ಯ ಮಂತ್ರಿಗಳವರು ಹೇಳಿದಂತೆ ಸನ್ಮಾನ್ಯ ಗಂಗಾಧರ್‌ರವರು ಈ ಸದನಕ್ಕೆ ಎಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ಪಕ್ಷದ ಜಿಲ್ಲಾಧ್ಯಕ್ಷರಾಗಿ ಕೂಡ ಸೇವೆಯನ್ನು ಮಾಡಿದಂಥದ್ದು ನೆನಪಾಗುತ್ತದೆ.

ಶ್ರೀಮತಿ ಸೌಂದರ್ಯರವರು ನಾವು ನೋಡನೋಡುತ್ತಿದ್ದ ಹಾಗೆನೇ ಅತ್ಯಂತ ಕಡಿಮೆ ಸಮಯದಲ್ಲಿ ಜನಪ್ರಿಯ ಮೇರು ನಟಿಯಾಗಿ ಇನ್ನೂ ಅನೇಕ ವರ್ಷಗಳ ತಮ್ಮದೇ ಆದಂತಹ ಛಾಪನ್ನು ಒತ್ತಬೇಕಾದಂತಹ ಒಬ್ಬ ಸುಪ್ರಸಿದ್ಧ ಚಲನಚಿತ್ರ ನಟಿಯನ್ನು ನಾವು ಕಳೆದುಕೊಂಡಿದ್ದೇವೆ. ಚಚುನಾವಣಾ ಸಂದರ್ಭದಲ್ಲಿ ಆಂಧ್ರಕ್ಕೆ ಪ್ರಚಾರಕ್ಕೆ ಹೊರಟ ಹೆಲಿಕಾಪ್ಟರ್ ಒಂದೆರಡು ನಿಮಿಷದಲ್ಲಿಯೇ ಬಿದ್ದು ಅವರ ಭಸ್ಮವಾದಂತಹ ದೇಹವನ್ನು ನೋಡುವಂತಹ ದೌರ್ಭಾಗ್ಯವನ್ನು ಈ ನಾಡಿನ ಜನರು ನೋಡಬೇಕಾಯಿತು. ಇವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ ತಾವೇನು ಹೇಳಿದ್ದೀರಿ ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ಅದಕ್ಕೆ ಧ್ವನಿಗೂಡಿಸಿ ಅವರ ಆತ್ಮಕ್ಕೆ ಚಿರಶಾಂತಿ

ಸಿಗಲಿ. ಈ ನೋವನ್ನು ತಡೆದುಕೊಳ್ಳುವಂತಹ ಶಕ್ತಿ ಅವರ ಕುಟುಂಬದವರಿಗೆ ಬರಲಿ ಎಂದು ಭಗವಂತನದಲ್ಲಿ ಪ್ರಾರ್ಥನೆ ಮಾಡಿ ನನ್ನ ಸಂತಾಪ ಸೂಚನೆಯನ್ನು ನನ್ನ ಪಕ್ಷದ ಪರವಾಗಿ ಮಂಡಿಸುತ್ತಿದ್ದೇನೆ.

+ಶ್ರೀ ಸಿದ್ಧರಾಮಯ್ಯ **(ಉಪ ಮುಖ್ಯಮಂತ್ರಿಗಳು)**:– ಸನ್ಮಾನ್ಯ ಅಧ್ಯಕ್ಷರೆ, ನಾಲ್ಕು ಜನ ನಮ್ಮನ್ನು ಅಗಲಿರತಕ್ಕಂಥ ಈ ಮನೆಯ ಮಾಜಿ ಸದಸ್ಯರು ಮತ್ತು ಮೇಲ್ಮನೆಯ ಸದಸ್ಯರಾಗಿದ್ದಂತಹವರು. ನಮ್ಮನ್ನು ಅಗಲಿದ್ದಾರೆ. ಅವರಿಗೆ ಸಂತಾಪವನ್ನು ಸೂಚಿಸಿ ತಾವೇನು ನಿರ್ಣಯ ಮಂಡಿಸಿದ್ದೀರಿ, ಅದನ್ನು ಅನುಮೋದನೆ ಮಾಡುತ್ತೇನೆ. ಮಾನ್ಯ ರಾಜೂಗೌಡ ಅವರು ನಮ್ಮ ಜಿಲ್ಲೆಯವರು. ಕೊಳ್ಳೇಗಾಲ ತಾಲ್ಲೂಕಿನವರು. ಈ ಮನೆಯಲ್ಲಿ ನಾಲ್ಕು ಬಾರಿ ಶಾಸಕರಾಗಿ ಕೆಲಸ ಮಾಡಿದ್ದಾರೆ. ಸಚಿವರಾಗಿಯೂ ಕೆಲಸ ಮಾಡಿದ್ದಾರೆ. ಕಳೆದ ವಿಧಾನಸಭೆಯಲ್ಲಿ ಶಾಸಕರಾಗಿದ್ದರು, ಮಂತ್ರಿಗಳೂ ಸಹ ಆಗಿದ್ದರು. ಅವರು ಕೆಳಹಂತದಿಂದ ಬಂದಂತಹ ಒಬ್ಬ ರಾಜಕಾರಣಿ. ಗ್ರಾಮ ಪಂಚಾಯಿತಿಯಿಂದ, ಕೋಅಪರೇಟಿವ್ ಸೂಸೈಟಿಗಳ ಮೂಲಕ, ತಾಲ್ಲೂಕು ಪಂಚಾಯತಿ ಹೀಗೆ ಕೆಳ ಹಂತದಿಂದ ಬಂದಿದ್ದಂತಹ ಒಬ್ಬ ರಾಜಕಾರಣಿ. ಹಾಗಾಗಿ ಜನರ ನಡುವೆ ಕೆಲಸ ಮಾಡಿಕೊಂಡು ಹನೂರು ಕ್ಷೇತ್ರ ಮತ್ತು ಮೈಸೂರು ಜಿಲ್ಲೆಯಲ್ಲಿ ಬಹಳಷ್ಟು ಸಾರ್ವಜನಿಕ ಬದುಕಿ–ನಲ್ಲಿ ತಮ್ಮನ್ನು ತೊಡಗಿಸಿಕೊಂಡು ಕೆಲಸ ಮಾಡಿದಂತಹವರು. ಈಗ ಅವರು ಇತ್ತೀಚೆಗೆ ನಮ್ಮನ್ನು ಅಗಲಿದ್ದಾರೆ. ಕೆಳ ಹಂತದಿಂದ ಬಂದಂತಹ ರಾಜಕಾರಣಿ ಆಗಿದ್ದರಿಂದ ಜನರ ಬದುಕನ್ನು ಅರ್ಥ ಮಾಡಿಕೊಂಡಿದ್ದರು. ಹಾಗಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥ ಒಂದು ದೊಡ್ಡ ಗುಣವನ್ನು ಅವರು ಬೆಳೆಸಿಕೊಂಡಿದ್ದರು. ಮತ್ತೆ ನಾವೆಲ್ಲಾ ಹತ್ತಿರದಿಂದ ನೋಡಿದ್ದಂತಹವರು. ಬಹಳ ವರ್ಷಗಳ ಕಾಲ ಜೊತೆಯಲ್ಲಿ ಸಾರ್ವಜನಿಕ ಜೀವನಲ್ಲಿ ಕೆಲಸ ಮಾಡಿದ್ದರಿಂದ ಅವರ ಸಾವಿನಿಂದ ಅವರ ಕ್ಷೇತ್ರಕ್ಕೆ ಮತ್ತು ನಮ್ಮ ಜಿಲ್ಲೆಗೆ ಮತ್ತು ರಾಜ್ಯಕ್ಕೆ ಅಪಾರವಾದಂತಹ ನಷ್ಟ ಆಗಿದೆ ಎಂದು ನಾನು ಭಾವಿಸಿಕೊಳ್ಳುತ್ತಾ ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ. ಅವರ ಕುಟುಂಬ ವರ್ಗದವರಿಗೆ ಅವರ ಸಾವಿನ ದುಃಖವನ್ನು ಭರಿಸತಕ್ಕ ಶಕ್ತಿ ಬರಲಿ ಎಂದು ಈ ಸಂದರ್ಭದಲ್ಲಿ ಕೋರುತ್ತೇನೆ. ಹಾಗೆಯೇ ಡಿ.ಬಿ. ಕಲ್ಮಣ್‌ಕರ್ ಅವರು. ಇವರು ಬಹಳ ದೀರ್ಘಕಾಲ ಸಾರ್ವಜನಿಕ ಜೀವನದಲ್ಲಿ ಇದ್ದಂಥವರು. ಗುಲ್ಬರ್ಗಾ ವಿಭಾಗದಿಂದ ಬಂದಂಥರವರು. ಹೈದರಾಬಾದ್ ವಿಮೋಚನೆಗಾಗಿ ಹೋರಾಟ ಮಾಡಿದಂಥವರು. ಬಹುಶಃ ಆ ಹೋರಾಟವನ್ನು ಪ್ರತಿವರ್ಷ ಕೂಡ ಆಚರಣೆ ಮಾಡಿಕೊಂಡು ಅದನ್ನು ಜನತೆಗೆ ನೆನಪು ಇಡತಕ್ಕ ಪ್ರಯತ್ನವನ್ನೂ ಕೂಡ ಮಾಡಿಕೊಂಡು ಬಂದಿದ್ದರು. ವಿಧಾನ ಪರಿಷತ್ತಿನ ಸಭಾಧ್ಯಕ್ಷರಾಗಿದ್ದಾಗ ನಾನು ಸಚಿವನಾಗಿ ಕೆಲಸ ಮಾಡತಕ್ಕ ಅವಕಾಶ ಸಿಕ್ಕಿತ್ತು. ಅವರು ಸಭಾಧ್ಯಕ್ಷರಾಗಿ ವಿಧಾನ ಪರಿಷತ್ತಿನಲ್ಲಿ ಬಹಳ ಉತ್ತಮವಾಗಿ ಸಭೆಯನ್ನು ನಡೆಸಿದನ್ನು ನಾವು ಇವತ್ತು ನೆನೆದು ಕೊಳ್ಳಬೇಕಾಗುತ್ತದೆ. ಜೊತೆಗೆ ಸಮಾಜವಾದಿ ಹಿನ್ನೆಲೆಯಿಂದ ಬಂದಂತಹವರು. 1967ರಲ್ಲಿ ಪಿಎಸ್‌ಪಿಯಿಂದ ಗೆದ್ದು ಬಂದವರು. ಪಿಎಸ್‌ಪಿ ಕಾಂಗ್ರೆಸ್ ಜೊತೆ ಮರ್ಜ್ ಆದ ಮೇಲೆ ಕಾಂಗ್ರೆಸ್ ಸದಸ್ಯರಾಗಿ, ಅಲ್ಲಿಂದ ಕಾಂಗ್ರೆಸ್‌ನಲ್ಲಿಯೇ ಕೆಲಸ ಮಾಡಿಕೊಂಡು, ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡಿಕೊಂಡು ಎರಡು ಬಾರಿ ವಿಧಾನ ಸಭಾ ಸದಸ್ಯರಾಗಿ, ಮೂರು ಭಾರಿ ವಿಧಾನ ಪರಿಷತ್ ಸದಸ್ಯರಾಗಿ ಎರಡೂ ಮನೆಗಳಲ್ಲಿ ಕೆಲಸ ಮಾಡತಕ್ಕಂಥ ಅವಕಾಶ ಅವರಿಗೆ ಸಿಕ್ಕಿತು. ಅಪಾರವಾದಂತಹ

ಜ್ಞಾನ, ಅನುಭವವನ್ನು ಪಡೆದುಕೊಂಡಿದ್ದರು. ಅಂತಹ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನು ಅಗಲಿದ್ದಾರೆ. ಅದರಿಂದ ರಾಜ್ಯಕ್ಕೆ ಬಹಳಷ್ಟು ನಷ್ಟ ಆಗಿದೆ ಅವರ ಆತ್ಮಕ್ಕೆ ಶಾಂತಿ ದೊರಕಲಿ, ಅವರ ಕುಟುಂಬ ವರ್ಗದವರಿಗೆ ಅವರ ಸಾವಿನ ದುಃಖವನ್ನು ಭರಿಸತಕ್ಕ ಶಕ್ತಿ ಬರಲಿ ಎಂದು ನಾನು ಈ ಸಂದರ್ಭದಲ್ಲಿ ಆಶಿಸುತ್ತೇನೆ. ಮತ್ತೆ ಪಿ. ವೆಂಕಟರಮಣ ಅವರೂ ಕೂಡ ನಮ್ಮ ಜಿಲ್ಲೆಯವರೇ; ಅವರು ನಂಜನಗೂಡಿನ ತಾಲ್ಲೂಕಿನವರು. ಹೆಚ್ಚಿಗೆ ಗ್ರಾಮದಿಂದ ಬಂದಂಥವರು. ಇವರೂ ಕೂಡ ಕೆಳಹಂತದಿಂದ ರಾಜಕೀಯ ಕ್ಷೇತ್ರಕ್ಕೆ ಬಂದಂತಹವರು. ರಾಜಕೀಯ ಕ್ಷೇತ್ರಕ್ಕೆ ಅವರು ಬಂದು ಪಂಚಾಯತಿಯಿಂದ ಮೇಲ್ಮಟ್ಟಕ್ಕೆ ಬಂದಿದ್ದಂತಹವರು. ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಹೌಸಿಂಗ್ ಬೋರ್ಡ್‌ನಲ್ಲಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಮಂತ್ರಿಯಾಗಿ ಕೆಲಸ ಮಾಡಿದ್ದಾರೆ. ಎಂಎಲ್‌ಎ ಆಗಿ ಕೆಲಸ ಮಾಡಿದ್ದಾರೆ. ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿ ಕೆಲಸ ಮಾಡಿದಂತಹವರು. ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಜನರಿಗೆ ನ್ಯಾಯ ದೊರಕಿಸಲಿಕ್ಕೆ ಹಿಂದುಳಿದ ಜಾತಿಯವರಿಗೆ ನ್ಯಾಯ ಒದಗಿಸಲಿಕ್ಕೆ, ಅದಕ್ಕೋಸ್ಕರ ಸತತವಾಗಿ ಹೋರಾಟ ಮಾಡಿದಂತಹ ಒಬ್ಬ ಕೆಳ ವರ್ಗ ಪರಿಶಿಷ್ಟ ಜಾತಿಯಿಂದ ಬಂದಂತಹ ವ್ಯಕ್ತಿ ಎಂದು ಇವತ್ತು ನಾವು ನೆನೆದುಕೊಳ್ಳಬೇಕಾಗುತ್ತದೆ. ನಮಗೂ ಅವರಿಗೂ ಬಹಳ ಒಡನಾಟ ಇತ್ತು. ನಮಗೂ ಅವರಿಗೂ ಅನೇಕ ವಿಚಾರಗಳಲ್ಲಿ, ಸಾಮಾಜಿಕ ನ್ಯಾಯದ ವಿಚಾರದಲ್ಲಿ ಬದ್ಧತೆ ಅವರಿಗೂ ಇದ್ದುದ್ದರಿಂದ ಅವರ ಬಗ್ಗೆ ನಾವು ಅಪಾರವಾದಂತಹ ಗೌರವವನ್ನು ಇಟ್ಟುಕೊಂಡಿದ್ದೆವು. ಇಂತಹ ಒಬ್ಬ ವ್ಯಕ್ತಿ ಇವತ್ತು ನಮ್ಮನ್ನು ಅಗಲಿದ್ದಾರೆ. ಸಾವಿನ ಕೊನೆಯವರೆಗೂ ಕೂಡ, ಅವರು ಯಾವಾಗಲಾದರೂ ನಮ್ಮನ್ನು ಭೇಟಿ ಮಾಡಿದಾಗ ಹೇಳುತ್ತಿದ್ದರು. ನೀವು ಕೆಳ ವರ್ಗದ ಜನರ ಪರವಾಗಿ ಹೋರಾಟ ಮಾಡಬೇಕು ಎಂದು. ಯಾರು ಸಾಮಾಜಿಕ ನ್ಯಾಯದಿಂದ ವಂಚಿತರಾಗಿದ್ದಾರೆ, ಅವರ ಪರವಾಗಿ ನೀವು ನಿಲ್ಲಬೇಕು ಎಂಬ ಮಾತನ್ನು ಅವರು ಯಾವಾಗಲೂ ಹೇಳುತ್ತಿದ್ದರು. ಅಂತಹ ಒಬ್ಬ ಧುರೀಣರು ನಮ್ಮನ್ನು ಅಗಲಿದ್ದಾರೆ. ಇಂಥವರ ಸಾವಿನಿಂದ ಬಹಳಷ್ಟು ನ್ಯಾಯದಿಂದ ವಂಚಿತರಾಗಿರತಕ್ಕಂಥ ಜನರಿಗೆ ಅವರ ನಾಯಕತ್ವ ಇಲ್ಲದಾಗಿದೆ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತಾ ಅವರ ಸಾವಿನಿಂದ ಆಗಿರುವ ದುಃಖವನ್ನು ಭರಿಸತಕ್ಕ ಶಕ್ತಿ ಅವರ ಕುಟುಂ ವರ್ಗಕ್ಕೆ ದೊರಕಲಿ ಮತ್ತು ಅವರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಹೇಳಿ ಈ ಸಂದರ್ಭದಲ್ಲಿ ನಾನು ಆಶಿಸುತ್ತೇನೆ. ಶ್ರೀ ಎನ್. ಗಂಗಾಧರ್ ಅವರೂ ಕೂಡ ನಮ್ಮ ಪಕ್ಷದಿಂದ ಎಂಎಲ್‌ಎ ಆಗಿದ್ದರು. 1985ನೇ ಇಸವಿಯಲ್ಲ ಅವರು ಶ್ರವಣಬೆಳಗೊಳ ಕ್ಷೇತ್ರದಿಂದ ಗೆದ್ದು ಬಂದಿದ್ದರು. ಅವರು ಭಾರತೀಯ ಜೀವ ವಿಮೆಯ ಪ್ರತಿನಿಧಿಯಾಗಿ ಕೆಲಸ ಮಾಡಿ, ಶಾಸಕರಾಗಿ ಬಹಳಷ್ಟು ಅನುಭವವನ್ನು ಪಡೆದುಕೊಂಡಿದ್ದರು. ಅವರೂ ಇತ್ತೀಚೆಗೆ ನಿಧನರಾಗಿದ್ದಾರೆ. ಅವರ ಆತ್ಮಕ್ಕೆ ಕೂಡ ಶಾಂತಿ ದೊರಕಲಿ ಎಂದು ಹೇಳುತ್ತಾ ಅವರ ಕುಟುಂಬ ವರ್ಗಕ್ಕೆ ಅವರ ಸಾವಿನ ದುಃಖವನ್ನು ಭರಿಸತಕ್ಕ ಶಕ್ತಿ ಬರಲಿ ಎಂದು ಹೇಳಿ, ಆಗಲಿದ ಎಲ್ಲರ ಕುಟುಂಬ ವರ್ಗದವರ ದುಃಖದಲ್ಲಿ ನಾನು ಕೂಡ ಭಾಗಿಯಾಗಿದ್ದೇನೆಂದು ತಿಳಿಸಿ ಈ ನಿರ್ಣಯವನ್ನು ಮತ್ತೊಮ್ಮೆ ಅನುಮೋದನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾವು ಸದನದ ಮುಂದೆ ಮಂಡಿಸಿರುವಂತಹ ಸಂತಾಪ ಸೂಚನೆಗೆ ಇಡೀ ಸದನವೇ ಸಹಮತವನ್ನು ಕೊಡುತ್ತದೆ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಉಪ ಮುಖ್ಯಮಂತ್ರಿಗಳು ಈ ಗಣ್ಯರ ಗುಣಗಾನವನ್ನು ಮಾಡಿದ್ದಾರೆ. ನಾವು ಅದು ಬಹಳ ನಿಗೂಢವಾದದ್ದು. ಇವತ್ತಿನವರೆಗೂ ಕೂಡ ಮನುಕುಲ ಅದರ ಬಗ್ಗೆ ಚಿಂತಿಸಿ ಅದರ ರಹಸ್ಯವನ್ನು ಅರಿಯುವ ಪ್ರಯತ್ನ ಮಾಡುತ್ತಿದೆ. ಆದರೆ ಆ ನಿಗೂಢತೆಯನ್ನು ನಾವು ಇನ್ನೂ ಪರಿಹರಿಸಲಿಕ್ಕೆ ಸಾಧ್ಯವಾಗಿಲ್ಲ. ಹುಟ್ಟಿನಂತೆ ಸಾವು ಕೂಡ ಬಹಳ ಶಾಶ್ವತವಾದುದ್ದು. ಬುದ್ಧ ಇದರ ಬಗ್ಗೆ ಬಹಳ ದೊಡ್ಡ ಪ್ರಯತ್ನವನ್ನು ಮಾಡಿದೆ. ಅಗಲುವಿಕೆ ಎನ್ನುವುದು ಒಂದು ದುಃಖ ಎಂದೂ ಕೂಡ ಹೇಳಿದೆ. ಅದು ದುಃಖ ಅವರ ಕುಟುಂಬಕ್ಕೆ, ಅವರ ಪರಿಸರಕ್ಕೆ, ಅವರ ಪರಿವಾರದವರ ಜೊತೆಗೆ ಅವರ ಜೊತೆಗೆ ಕೆಲಸ ಮಾಡಿದಂತಹ ಎಲ್ಲಾ ಸ್ನೇಹಿತರಿಗೂ ಕೂಡ ಅಂತಹ ಒಂದು ಅಗಲುವಿಕೆಯ ದುಃಖ ಇದ್ದೇ ಇರುತ್ತದೆ. ಈ ಸಂದರ್ಭದಲ್ಲಿ ಈ ಸದನದ ಘನತೆಯನ್ನು ಹೆಚ್ಚಿಸುವಂತೆ ಕೆಲಸ ಮಾಡಿದ, ಸಾರ್ವಜನಿಕ ಜೀವನದಲ್ಲಿ ಒಂದು ಒಳ್ಳೆಯ ಬದುಕನ್ನು ಮತ್ತು ಮಾರ್ಗದರ್ಶನವನ್ನು ಮಾಡಿದಂಥವರ ಬಗ್ಗೆ ಸಂತಾಪ ಸೂಚನೆಯನ್ನು ನಾವು ಮಾಡುವುದರ ಜೊತೆಗೆ, ನಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸುವಂಥದ್ದೂ ಕೂಡ ನಮ್ಮ ಗುರುತರವಾದ ಕರ್ತವ್ಯ ಆಗಿದೆ.

11.40 ಎಎಂ

ಈ ಕಾರಣಕ್ಕಾಗಿ ಎಲಿಯಟ್‌ರವರು ಒಂದು ಮಾತನ್ನು ಹೇಳುತ್ತಾರೆ. In the wintery season, some come for the breakfast, and they sip and go away ಎನ್ನುವ ಒಂದು ಮಾತನ್ನು ಹೇಳುತ್ತಾರೆ. ಅಂದರೆ, ಇಂತಹ ಬದುಕಿನಲ್ಲಿ ನಮ್ಮಂತಹ ಅನೇಕರು ಬೆಳಗಿನ ಉಪಹಾರ ಸಿಗುತ್ತದೆಂದು ಬಂದು ಹೋದಂತಹವರು ಬಹಳ ಜನರಿರುತ್ತಾರೆ. ಆದರೆ, ನಿಜವಾಗಿಯೂ ಕೂಡ ತಮ್ಮ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋದವರು ಬಹಳ ಕಡಿಮೆ. ಆ ರೀತಿಯಾಗಿ ಈ ಸದನದ ಕಲಾಪಗಳಲ್ಲಿ, ತಮ್ಮ ಸಾರ್ವಜನಿಕ ಬದುಕಿನಲ್ಲಿ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿರುವಂತಹ ಕೆಲವೆ ಕೆಲವು ಜನರಲ್ಲಿ ಮಾನ್ಯ ಕಲ್ಮಣ್‌ಕರ್‌ರವರು, ಪಿ. ವೆಂಕಟರಮಣ ರವರು ಮತ್ತು ಇನ್ನೂ ಅನೇಕ ಹಿರಿಯರಿದ್ದಾರೆ. ಈಗಾಗಲೇ ಮಾನ್ಯ ಉಪ ಮುಖ್ಯಮಂತ್ರಿಯವರು ಹೇಳಿರುವಂತೆ ಕಲ್ಮಣ್‌ಕರ್ ಅವರು ಮೇಲ್ಮನೆಯ ಸಭಾಪತಿಗಳಾಗಿದ್ದಾಗ ಅವರ ಜೊತೆ ಕೆಲಸ ಮಾಡುವಂತಹ ಸಮಯ ಮತ್ತು ಸಂದರ್ಭ ನಮಗೆಲ್ಲಾ ಲಭ್ಯವಾಗಿತ್ತು. ನಮ್ಮ ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಕೂಡ ಹೈದರಾಬಾದ್ ವಿವೋಚನೆಯಾಗಿರಲಿಲ್ಲ, ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಇದಕ್ಕೆಲ್ಲಾ ಇಂಗ್ಲೀಷರು ಮಾಡಿದಂಥ ಅನೇಕ ಕುತಂತ್ರಗಳಲ್ಲಿ Doctrine of paramountcy ಎನ್ನುವಂತಹ ಮುಖ್ಯ ನೀತಿಯನ್ನು ಅನುಸರಿಸಿದರು. ಅಂದರೆ, ನಮ್ಮ native states ಏನಿದ್ದವು. ಮೂಲಭೂತವಾಗಿ ಮೊದಲಿದ್ದಂಥ ರಾಜ್ಯಗಳು, ಅಲ್ಲಿನ ರಾಜರುಗಳು, ಅವರು ಅಧಿಕಾರ, ಸ್ವಾತಂತ್ರ್ಯ ಬಂದಂಥ ಸಂದರ್ಭಗಳಲ್ಲಿ ಪಾಕಿಸ್ತಾನಕ್ಕಾದರೂ ಸೇರಬಹುದು, ಭಾರತಕ್ಕಾದರೂ ಸೇರಬಹುದು ಅಥವಾ ಸ್ವತಂತ್ರವಾಗಿ ತಮ್ಮನ್ನು ತಾವು ಘೋಷಿಸಿಕೊಳ್ಳಬಹುದೆನ್ನುವ ಮಾತೂ ಕೂಡ ಇತ್ತು. ಆ ರೀತಿಯಾಗಿ ಬಳ್ಳಾರಿ ಜಿಲ್ಲೆಯ ಸಂಡೂರನ್ನು ಕೂಡ ಸ್ವತಂತ್ರವಾಗಿ ಘೋಷಿಸಿದ್ದನ್ನು ನಾವು ಕಂಡಿದ್ದೇವೆ.

ನಮ್ಮ ಇಡೀ ಭಾರತ ದೇಶ ಸುತ್ತಲೂ ಆವರಿಸಿಕೊಂಡಿದ್ದಾಗ ಅಲ್ಲಿನ ಬಹುಸಂಖ್ಯಾತರೆಲ್ಲರ ಅಭಿಪ್ರಾಯಗಳನ್ನು ಕಡೆಗಣಿಸುವ ಮೂಲಕ ಅಲ್ಲಿನ ನವಾಬರು ಸ್ವಾತಂತ್ರ್ಯವನ್ನು ಘೋಷಿಸಿದ ಸಂದರ್ಭದಲ್ಲಿ ರಜಾಕರು ಎನ್ನುವ, ಪುಂಡು–ಪೋಕರಿಯಾಗಿದ್ದ ವ್ಯಕ್ತಿಯೊಬ್ಬರನ್ನು ಮುಂದೆ ನಿಲ್ಲಿಸಿ ಅವರ ಮೂಲಕ ಸ್ವಾತಂತ್ರ್ಯದ ಆಶೋತ್ತರಗಳನ್ನು ದಮನಗೊಳಿಸುವ ಪ್ರಯತ್ನವನ್ನು ನಿಜಾಮಶಾಹಿ ಮಾಡಿರುವಂತಹ ಸಂದರ್ಭಗಳಲ್ಲಿ ಬಹುಸಂಖ್ಯಾತರಾಗಿದ್ದ ಪ್ರಜೆಗಳು ಅನುಭವಿಸಿದ ನೋವಿಗೆ ಇವರು ದೊಡ್ಡ ಹೋರಾಟ ಮಾಡಿರುವುದನ್ನು ನಾವು ಕಂಡಿದ್ದೇವೆ. ಆ ಸ್ವಾತಂತ್ರ್ಯ ಹೋರಾಟದಲ್ಲಿ ನಮ್ಮ ಭಾರತ ದೇಶದ ಸ್ವಾತಂತ್ರ್ಯಕ್ಕೂ ಅವರ ಸ್ವಾತಂತ್ರ್ಯದ ಹೋರಾಟಕ್ಕೂ ಬಹಳ ದೊಡ್ಡ ವ್ಯತ್ಯಾಸವಿತ್ತು. ಅವ್ಹೊತ್ತು ಸರ್ದಾರ್ ವಲ್ಲಭಬಾಯಿ ಪಟೇಲ್‌ರವರು ನಮ್ಮ ದೇಶದ ಗೃಹಮಂತ್ರಿಗಳು ಮತ್ತು ಉಪಪ್ರಧಾನ ಮಂತ್ರಿಗಳಾಗಿದ್ದ ಕಾರಣಕ್ಕೆ ಹೈದರಾಬಾದ್ ಕೂಡ ನಮ್ಮ ಭೂಭಾಗವಾಯಿತು. ಇಲ್ಲದಿದ್ದರೆ, ಅವರು ಮಾಡಿದಂತಹ ಕುತಂತ್ರಕ್ಕೆ ವಿವಾದವೆನಿಸಿಕೊಂಡು ಅದೂ ಕೂಡ ನಮ್ಮ ನಡುವಿನ ಒಂದು ಕಾಶ್ಮೀರವಾಗಿ ಉಳಿಯುತ್ತಿತ್ತೇನೋ! A dagger in the womb ಎಂದು ಇಸ್ರೇಲ್ ಬಗ್ಗೆ ಕೆಲವರು ಮಾತನಾಡುತ್ತಾರಲ್ಲಾ, ಹಾಗೆಯೇ ಇಲ್ಲಿಯೂ ಕೂಡ ಕುತಂತ್ರದ ಸ್ಥಿತಿ ನಿರ್ಮಾಣವಾಗುತ್ತಿತ್ತು. ಆಗ ಸರ್ದಾರ್ ವಲ್ಲಭಬಾಯಿ ಪಟೇಲ್‌ರವರು ತೆಗೆದುಕೊಂಡ ನಿಲುವಿಗೆ ಕಲ್ಮಣ್‌ಕರ್ ಅಂತಹವರು ಮತ್ತು ಸ್ವಾಮಿ ರಮಾನಂದ ಅಂತಹವರು ಹೋರಾಟ ಮಾಡಿದ ಹಿರಿಯ ಜೀವಿಗಳು. ಇವರ ಜೊತೆ ಕನ್ನಡ ನಾಡಿನ ಜಿಲ್ಲೆಗಳನ್ನು ನೋಡಿಕೊಳ್ಳುವುದಕ್ಕೆ ವೀರೇಂದ್ರ ಪಾಟೀಲರು, ಮರಾಠ ಜಿಲ್ಲೆಗಳನ್ನು ನೋಡಿಕೊಳ್ಳಲು ಎಸ್.ಬಿ. ಚವಾಣರು, ಹಾಗೆಯೇ ತೆಲುಗಿನ ಪ್ರದೇಶಗಳನ್ನು ನೋಡಿಕೊಳ್ಳಲು ಪಿ.ವಿ. ನರಸಿಂಹರಾವ್‌ರವರು ಕಾರ್ಯದರ್ಶಿಗಳಾಗಿ ಕೆಲಸ ಮಾಡಿದರು. ಅವರ ನಿರಂತರವಾದ ಹೋರಾಟದ ಫಲವಾಗಿ ಇವ್ಹೊತ್ತು ಹೈದರಾಬಾದ್ ಭಾಗದಲ್ಲಿರುವ ಎಲ್ಲಾ ಜಿಲ್ಲೆಗಳೂ ಏಕೀಕರಣದ ನಂತರ ನಮ್ಮ ನಾಡಾಗಿದೆ. ಆದರೆ, ಸ್ವಾತಂತ್ರ್ಯ ಸಮರಕ್ಕೆ ಇವರು ಕೊಟ್ಟಂಥ ಕೊಡುಗೆಯನ್ನು ನಾವು ಸ್ಮರಿಸಬೇಕಾಗುತ್ತದೆ. ಸರ್ದಾರ್ ವಲ್ಲಭಬಾಯಿ ಪಟೇಲ್‌ರವರ ಮೂರ್ತಿಯನ್ನು ಗುಲ್ಬರ್ಗಾದಲ್ಲಿ ಸ್ಥಾಪಿಸಿದಂಥ ಕೀರ್ತಿ, ಸುಭಾಶ್‌ಚಂದ್ರ ಬೋಸರ ಬಗ್ಗೆ ಹೋರಾಟ ಮಾಡಿದಂಥ ಕೀರ್ತಿ ಇವರಿಗೆ ಸಲ್ಲತಕ್ಕದ್ದು. ಆ ಸಂದರ್ಭದಲ್ಲಾದ ಸ್ವಲ್ಪ ಅಹಿತಕರ ಘಟನೆಗಳಿಗೆ ಅವ್ಹೊತ್ತಿನ ಗೃಹಮಂತ್ರಿಗಳಾಗಿದ್ದಂಥ ನಮ್ಮ ಸಿಂಧ್ಯಾರವರು, ಮುಖ್ಯಮಂತ್ರಿಗಳಾಗಿದ್ದ ಜೆ.ಹೆಚ್. ಪಟೇಲರು ಹೋಗಿ ಆ ಮೂರ್ತಿಯನ್ನು ಅನಾವರಣಗೊಳಿಸುವುದರ ಮೂಲಕ ಹೈದರಾಬಾದ್–ಕರ್ನಾಟಕದ ಕೆಲವು ಭಾಗಗಳು ಮತ್ತು ಹೈದರಾಬಾದ್ ಕೂಡ ಸ್ವತಂತ್ರವಾಗದೆ ನಮ್ಮ ಭಾರತ ದೇಶದ ಅಖಂಡತ್ವದೊಳಗೆ ಮತ್ತು ಸಾರ್ವಭೌಮತ್ವದೊಳಗೆ ಸೇರಿಸಿಕೊಂಡ ಬಗ್ಗೆ ಮತ್ತು ಅವರು ಮಾಡಿದ ಸೇವೆ ಅನುಪಮ ಮತ್ತು ಅವರು ದೀರ್ಘಕಾಲ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಒಟ್ಟಿನಲ್ಲಿ ಇಂದಿನ ತಲೆಮಾರಿನ ಜನರನ್ನು ಗಮನಿಸಿದಾಗ ಅವರು ಎಂತಹ ಮೌಲ್ಯಗಳಿಗೆ ಒಳಗಾಗಿದ್ದರೆನ್ನುವುದು ಗೊತ್ತಾಗುತ್ತದೆ.

ಮಾನ್ಯ ಪಿ. ವೆಂಕಟರಮಣರವರು ಖಾದಿ ಗ್ರಾಮೋದ್ಯೋಗದ ಬಗ್ಗೆ ಹೆಚ್ಚು ಆಸಕ್ತಿ ತಾಳಿ, ಗಾಂಧಿವಾದದ ಬಗ್ಗೆ ತಮ್ಮನ್ನು ತಾವು ತೊಡಗಿಸಿಕೊಂಡವರು. ಅಂದಿನ ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ, ಸದಸ್ಯರಾಗಿ ಆ ಭಾಗದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದಂತಹವರೂ ಕೂಡ ಆಗಿದ್ದಾರೆ.

ಮಾನ್ಯ ಜಿ. ರಾಜುಗೌಡರೂ ಕೂಡ ವರ್ಣಮಯವಾದ, ವಿವಾದಾತ್ಮಕವಾದ ವ್ಯಕ್ತಿತ್ವ ಪಡೆದವರಾಗಿದ್ದರೂ ಅವರು 'ಉತ್ತಮ ಪಂಚಾಯಿತಿ' ಪ್ರಶಸ್ತಿ ಪಡೆದವರಾಗಿದ್ದರಿಂದ 'ಅತ್ಯುತ್ತಮ ಮಂಡಳಿ ಪಂಚಾಯಿತಿಯ ಪ್ರಧಾನ' ರೆಂಬ ಪುರಸ್ಕಾರಕ್ಕೆ ಅವರು ಅರ್ಹರಾಗಿದ್ದರು. ಕೆಳ ಮಟ್ಟದ ಪ್ರಜಾಪ್ರಭುತ್ವದ ತಲಸ್ಪರ್ಶಿ ಜ್ಞಾನ ಪಡೆದವರಾದ ಅವರ ಬಗ್ಗೆ ಸಂತಾಪ ಸೂಚನೆಯನ್ನು ಮತ್ತು ಎನ್. ಗಂಗಾಧರ್ ಅವರೊಂದಿಗೆ ಕೆಲಸ ಮಾಡಿದಂತಹ ಒಂದು ಅವಕಾಶ ಕೂಡ ನಮ್ಮದಾಗಿತ್ತು. ಅವರನ್ನು ಈ ಸಂದರ್ಭದಲ್ಲಿ ತಾವು ಸ್ಮರಿಸಿ ಏನು ಶ್ರದ್ಧಾಂಜಲಿ ಅರ್ಪಿಸಿದ್ದೀರಿ, ಇದಕ್ಕೆ ಇಡೀ ಸದನ ಇವೊತ್ತು ಸಹಮತಿ ವ್ಯಕ್ತಪಡಿಸುತ್ತದೆ. ಎಲ್ಲಾ ಮೃತರ ಆತ್ಮಕ್ಕೆ ಚಿರಶಾಂತಿ ಕೋರಿ ಭಗವಂತ ಅವರ ಕುಟುಂಬ ವರ್ಗಕ್ಕಾದ ನಷ್ಟವನ್ನು ಭರಿಸುವಂಥ ಶಕ್ತಿ ನೀಡಲೆಂದು ನಿಮ್ಮೊಂದಿಗೆ ನಾನೂ ಕೂಡ ಸಹಮತ ವ್ಯಕ್ತಪಡಿಸಿ ಹಾರೈಸುತ್ತೇನೆ.

+**ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)**:– ಮಾನ್ಯ ಅಧ್ಯಕ್ಷರೆ, ಸಾವು ನಿಶ್ಚಿತ, ಬದುಕು ನಾವು ನಿರೂಪಿಸಿಕೊಂಡಿರುವ ಹಾಗಿರುತ್ತದೆ. ನಾವೆಲ್ಲರೂ ಒಂದು ದಿವಸ ಸಾಯುತ್ತೇವೆ, ಯಾರೂ ಹಾಗೆಯೇ ಇರುತ್ತೇವೆಂದು ಭಾವಿಸಿಲ್ಲ. ಆದರೂ ಸಾರ್ವಜನಿಕ ಬದುಕಿಗಾಗಿ ತಮ್ಮನ್ನು ತೊಡಗಿಸಿಕೊಂಡವರಿಗೆ, ಕರ್ಪೂರದ ರೀತಿಯಲ್ಲಿ ಉರಿದು ಅಂತ್ಯವಾದಾಗ ಅವರ ಬಗ್ಗೆ ಒಂದೆರಡು ಒಳ್ಳೆಯ ಮಾತುಗಳನ್ನಾಡಬೇಕಾದ್ದು ನಮ್ಮೆಲ್ಲರ ಗೌರವವೆಂದು ತಿಳಿದುಕೊಂಡು, ತಾವು ಮಂಡಿಸಿರುವ ಸಂತಾಪ ಸೂಚನೆಯಲ್ಲಿ ದಿವಂಗತರಾದ ನಾಲ್ಕು ಜನರೇನಿದ್ದಾರೆ, ಇವರುಗಳ ಕುರಿತು ಮಾತನಡಿದ ಮಾನ್ಯ ಸದಸ್ಯರೆಲ್ಲರ ಅಭಿಪ್ರಾಯಗಳಿಗೆ ಸಹಮತ ವ್ಯಕ್ತಪಡಿಸುತ್ತಾ, ದಿವಂಗತರಲ್ಲಿ ಇಬ್ಬರನ್ನು ನಾನು ಬಲ್ಲೆ. ಒಂಭತ್ತನೇ ವಿಧಾನಸಭೆಯಲ್ಲಿ ಜಿ. ರಾಜುಗೌಡರಿದ್ದರೆ ಮೇಲ್ಮನೆಯಲ್ಲಿ ಕಲ್ಮಣ್‌ಕರ್‌ರವರು ಸಭಾಪತಿಗಳಾಗಿದ್ದರು. ಆ ಮೊದಲು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾಗ ಸಮಿತಿಗಳಲ್ಲಿ ನಮ್ಮೊಂದಿಗೆ ಕೆಲಸ ಮಾಡಿದ್ದರು. ಕಲ್ಮಣ್‌ಕರ್‌ರವರ ಹುರುಪು, ಹಠ ನೆನೆಸಿಕೊಂಡರೆ ವಯಸ್ಸಿನಲ್ಲಿ ಅವರಿಗಿಂತಲೂ ಚಿಕ್ಕವರಾಗಿದ್ದ ನಮ್ಮಲ್ಲಿ ಅವರ ಬಗ್ಗೆ ಒಳ್ಳೆಯ ಭಾವನೆ ಬರುತ್ತಿತ್ತು. ನಾಡಿಗಾಗಿ ಅನೇಕ ರೀತಿಯ ಹೋರಾಟಗಳನ್ನು ಮಾಡಿ ತಮ್ಮದೇ ಛಾಪನ್ನು ಮೂಡಿಸಿ ಹೋಗಿದ್ದಾರೆ. ಅಷ್ಟೇ ಅಲ್ಲ, ಬಹುಶಃ ನಮ್ಮ ಬೆಳೆಯಲು, ವಿಧಾನ ಮಂಡಲ ಕಾರ್ಯಾಲಯವು ಎರಡು ಕವಲುಗಳಾಗಿ ಉಳಿದುಕೊಳ್ಳುವುದಕ್ಕೆ ಕಲ್ಮಣ್‌ಕರ್‌ರವರ ಪಾತ್ರ ಬಹಳವಾಗಿ ಇತ್ತೆಂದು ನಾನು ಬಲ್ಲೆ ಅಂತಹವರಿಗೆ ಮತ್ತು ರಾಜುಗೌಡರು ಬಹಳ ಕ್ಲಿಷ್ಟವಾಗಿ ನಮ್ಮಂತಹವರು ಎದುರಿಸಬೇಕಾಗಿದ್ದ ವಿಧಾನಸಭಾ ಕ್ಷೇತ್ರವನ್ನು ಗೆದ್ದು ಬರುತ್ತಿದ್ದಂಥ ಧೀಮಂತರು. ಅವರಿಗೆ ಹಾಗೂ ಇನ್ನುಳಿದ ಇಬ್ಬರಿಗೂ ಭಗವಂತ ಕೊಟ್ಟಿರುವ ಚಿರಶಾಂತಿ ಹಾಗೂ ಅದನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಕೊಡಲೆಂದು ಹಾರೈಸುತ್ತೇನೆ.

ಅಧ್ಯಕ್ಷರೆ, ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗುತ್ತದೆ. ಶಾಸಕರಾದವರು ಮಾಜಿಗಳಾಗಿ ಕಷ್ಟ–ಕಾರ್ಪಣ್ಯಗಳಿಗೆ ಸಿಲುಕಿಕೊಂಡು, ಅದರಲ್ಲೂ ಆರೋಗ್ಯದಲ್ಲಿ ತೊಂದರೆ ಯುಂಟಾದಾಗ, ಯಾವುದೇ ರಕ್ಷಣೆ ಇಲ್ಲದೆ ಪಡಿಪಾಟಲು ಪಟ್ಟು ಸತ್ತು ಹೋಗುವ ಸ್ಥಿತಿ ನಿರ್ಮಾಣವಾಗುತ್ತದೆ. ಆದಕಾರಣ, ಈ ಸಭೆ ಈಗಲಾದರೂ ಒಂದು ಆಲೋಚನೆ ಮಾಡಬೇಕು ಏನೆಂದರೆ, ಮಾಜಿ ಶಾಸಕರ ಆರೋಗ್ಯ ವ್ಯವಸ್ಥೆ ನೋಡಿಕೊಳ್ಳುವುದಕ್ಕೆ ಏನಾದರೂ ಕಾನೂನು

ಮಾಡಿದರೆ ನಿಜವಾಗಿಯೂ ಇನ್ನೂ ಒಂದೆರಡು, ನಾಲ್ಕು ವರ್ಷಗಳ ಕಾಲ ಬದುಕುವ ಸ್ಥಿತಿಗೆ ಅವರುಗಳನ್ನು ನಾವು ತರಬಹುದೆಂದು ನನಗನ್ನಿಸುತ್ತದೆ. ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ತಮಗೆ ನನ್ನ ಹಾಗೂ ನನ್ನ ಪಕ್ಷದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

+ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):– ಮಾನ್ಯ ಅಧ್ಯಕ್ಷರೆ, ತಾವು ತಂದಿರುವ ಸಂತಾಪ ಸೂಚಕ ನಿರ್ಣಯವನ್ನು ನಾನು ಅನುಮೋದಿಸುತ್ತಾ ಜಿ. ರಾಜುಗೌಡರು, ಡಿ.ಬಿ. ಕಲ್ಮಣ್‌ಕರ್‌ರವರು, ಪಿ. ವೆಂಕಟರಮಣ, ಎನ್. ಗಂಗಾಧರ್ ಹಾಗೂ ಸಿನಿಮಾ ನಟಿ ಸೌಂದರ್ಯ ಇವರುಗಳ ಆತ್ಮಕ್ಕೆ ಶಾಂತಿ ಕೋರುತ್ತಾ, ದಿವಂಗತ ಕಲ್ಮಣ್‌ಕರವರ ಬಗ್ಗೆ ಹೇಳುವುದಾದರೆ, ಅವರು ನಮ್ಮೊಂದಿಗೆ ವಿದೇಶಕ್ಕೆ ಬಂದಿದ್ದರು. ಸುಭಾಷ್‌ಚಂದ್ರ ಬೋಸ್‌ರ ಪುತ್ರಿ ಜರ್ಮನ್ ದೇಶದಲ್ಲಿದ್ದರು. ಅವರನ್ನು ನಮಗೆಲ್ಲರಿಗೂ ತೋರಿಸುವ ವ್ಯವಸ್ಥೆಯನ್ನು ಮಾಡುವ ಮುಖಾಂತರ ಹೆಚ್ಚಿನ ಅವಕಾಶ ಕಲ್ಪಿಸಿಕೊಟ್ಟರು. ಮತ್ತು ವಿಧಾನಸೌಧದ ಮುಂದೆ ಸುಭಾಷ್‌ಚಂದ್ರ ಬೋಸ್‌ರ ಪ್ರತಿಮೆ ಬರುವುದಕ್ಕೂ ಅವರೇ ಕಾರಣಕರ್ತರು. ಹಿಂದೆ ವಜಾ ಸಮಾಜವಾದಿ ಪಕ್ಷದ (ಪಿಎಸ್‌ಪಿ) ಶಾಸಕರಾಗಿ ಬಹಳ ವರ್ಷಗಳ ಕಾಲ ಈ ಸದನದಲ್ಲಿ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿದವರಾಗಿದ್ದಾರೆ. ಆಗ ಅವರು ಶಾಸಕರಾಗಿದ್ದಾಗ ಈ ರಾಜ್ಯದ ಬಗ್ಗೆ ನಿರಂತರ ಹೋರಾಟ ಮಾಡಿದ್ದಾರೆ. ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯವರು ಆಗ ಕೆಂಪು ಟೋಪಿ ಧರಿಸುತ್ತಿದ್ದರು. ಆಗ ಕೆಂಪು ಟೋಪಿಗಳೇ ಇಲ್ಲಿ ಎದ್ದು ಕಾಣುತ್ತಿತ್ತು. ಒಂದು ದೊಡ್ಡ ಇತಿಹಾಸವೇ ಆಗ ನಿರ್ಮಾಣವಾಗಿತ್ತು. ಆ ಸಂದರ್ಭದಲ್ಲಿ ಅವರು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಿ ಕೊನೆಗೆ ಮೇಲ್ಮನೆಯ ಸಭಾಪತಿಯಾಗಿ ಆಳವಾಗಿ ಅಭ್ಯಾಸ ಮಾಡಿ ವಿಧಾನ ಪರಿಷತ್ತಿನಲ್ಲಿ ಒಳ್ಳೆಯ ಹೆಸರು ಮಾಡಿದವರು ದಿವಂಗತ ಶ್ರೀಮಾನ್ ಡಿ.ಬಿ. ಕಲ್ಮಣ್‌ಕರ್‌ರವರು. ಪಿ. ವೆಂಕಟರಮಣರವರು ನಮ್ಮ ಪಕ್ಷದ ತಾಲ್ಲೂಕಿನವರಾಗಿದ್ದು ಅವರು ವಿಧಾನಸಭೆ ಅಧ್ಯಕ್ಷರಾಗಿದ್ದಾಗ ನಾನು ಶಾಸಕನಾಗಿರಲಿಲ್ಲ. ಆಗ ನನ್ನ ಸದಸ್ಯತ್ವ ರದ್ದಾಗಿತ್ತು. ಆಗ ಹೇಗಾದರೂ ಗಲಾಟೆ ಮಾಡಿ ನನ್ನನ್ನು ಶಾಸನಸಭೆಗೆ ಕರೆಸಿಕೊಳ್ಳಬೇಕೆಂದು ನಾನು ಪ್ರಯತ್ನಪಟ್ಟಿ. ಆಗ ಅಧ್ಯಕ್ಷರೆ ಮೇಲೆ ಒಂದು ಟೀಕೆ ಮಾಡಿ ನಾನು ಒಂದು ಪತ್ರವನ್ನು ಬರೆದೆ, ನನ್ನನ್ನು ಹಕ್ಕುಚ್ಯುತಿ ಹಾಕಿ ಚೀಮಾರಿಗಾದರೂ ಒಳಗಾದರೂ ಕರೆಸಿಕೊಳ್ಳಲಿ ಎಂದು, ನನಗೆ ಪುನಃ ಅವರು ಬೆಳಿಗ್ಗೆ ಸಿಕ್ಕಿದರು, ನನ್ನನ್ನು ಕರೆದು ಮಾತನಾಡಿದರೂ, ಎಲ್ಲಾದರೂ ಉಂಟೇ, ನನ್ನ ತಾಲ್ಲೂಕಿನವರು ತಾವು, ನಿಮ್ಮನ್ನು ಒಳಗೆ ಕರೆಸುವುದು ಎಂದರೆ ಹೇಗೆ? ಸಾಧ್ಯವೇ ಇಲ್ಲ, ನಿಮಗೆ ಶಿಕ್ಷೆಯನ್ನು ಕೊಡಲು ನಾನು ತಯಾರಾಗಿಲ್ಲ, ನೀವು ನಮಗೆ ಬಹಳ ಬೇಕಾಗಿರುವವರು ಎಂದರು, ನನಗೆ ಬೇಕಾಗಿದ್ದು ನನ್ನನ್ನು ಅವರು ಒಳಕ್ಕೆ ಕರೆಯಲಿ ಎಂದು, ಅವರಿಗೆ ಬೇಕಾಗಿದ್ದು ನನಗೆ ಶಿಕ್ಷೆಯನ್ನು ಕೊಡಬಾರದು ಎಂದು, ಬಹಳ ಅತ್ಯಂತ ಮೃದುವಾದಂಥ ಒಳ್ಳೆಯ ವ್ಯಕ್ತಿತ್ವ ಇರತಕ್ಕವರು, ಸಚಿವರಾಗಿದ್ದರು, ವಿಧಾನಸಭೆಯ ಅಧ್ಯಕ್ಷರಾಗಿದ್ದರು, ಅನೇಕ ಕೆಲಸಗಳನ್ನು ಮಾಡಿರತಕ್ಕಂಥ ಒಬ್ಬ ಒಳ್ಳೆಯ ವ್ಯಕ್ತಿ. ನಾವು ಪ್ರತಿಸಲವೂ ಅಗಲಿದವರಿಗೆ ಇಲ್ಲಿ ಸಂತಾಪ ಸೂಚನೆಯನ್ನು ಮಾಡುತ್ತೇವೆ. ಆದರೆ ಇವರುಗಳ ಹೆಸರು ಉಳಿಯಲು ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆಯೇ ಎಂದರೆ ಖಂಡಿತಾ ಇಲ್ಲ. ಎಲ್ಲೋ ಇತ್ತೀಚೆಗೆ ಅಲ್ಲಿ ಇಲ್ಲಿ ಶಾಸಗಾಂಗದಲ್ಲಿ ಕೆಲವು ಪುಸ್ತಕಗಳು ಹೊರಿಯರದ್ದು ಬರುತ್ತಿದೆ. ಆದರೆ ನನಗನ್ನಿಸುತ್ತದೆ. ಇದಕ್ಕಾಗಿ ಇಲ್ಲಿ ಕೆಂದ್ರದಲ್ಲಿರತಕ್ಕಂಥ ಸೆಂಟ್ರಲ್

ಹಾಲ್ ರೀತಿ ಒಂದು ದೊಡ್ಡ ಹಾಲನ್ನು ನಿರ್ಮಾಣ ಮಾಡಿದರೆ ಒಳ್ಳೆಯದು. ಈಗ ನಾವು ಕೇಳಿದರೆ ಅನೇಕರ ವಿಚಾರಗಳು ಬರುವುದಿಲ್ಲ, ಅದು ನಮಗೆ ಸಿಗುವುದೇ ಇಲ್ಲ. ಇವತ್ತಿನ ಸಂತಾಪ ಸೂಚನೆ ಮುಗಿದ ಮೇಲೆ ನಮ್ಮ ಕರ್ತವ್ಯ ಮುಗಿಯಿತು, ಇದರಿಂದ ಏನೂ ಪ್ರಯೋಜನವಾಗುವುದಿಲ್ಲ, ಇದು ನಮ್ಮ ನಿಮ್ಮ ಏನೋ ಒಂದು ನಡೆದುಕೊಂಡು ಬಂದಿರತಕ್ಕಂಥ ಒಂದು ವ್ಯವಸ್ಥೆ. ನಾಳೆ ವೆಂಕಟರಮಣರವರು ಏನಾಗಿದ್ದರು, ಎಷ್ಟು ವರ್ಷ ಇದ್ದರು, ಅವರು ಅಧ್ಯಕ್ಷರಾಗಿದ್ದರು, ಇವರ ಇತಿಹಾಸವೇನು ಎಂಬುದು ನಮ್ಮಲ್ಲಿ ಏನೂ ಇಲ್ಲ, ಕೊನೆಗೆ ಅವರ ಚಿತ್ರಪಟವಾದರೂ ನೋಡಲು ಎಲ್ಲಾದರೂ ಒಂದು ಕಡೆ ಬೇಕಲ್ಲಾ. ಈ ರೀತಿ ಅವರ ಹೆಸರಿನ ಕನಿಷ್ಟ ಕಾರ್ಯಕ್ರಮವಾದರೂ ನಾವು ಮಾಡತಕ್ಕ ವ್ಯವಸ್ಥೆ ತಮ್ಮ ಕಾಲದಲ್ಲಿ, ತಾವಾದರೂ ಮುಂದಾಗಿ ಮಾನ್ಯ ಮುಖ್ಯಮಂತ್ರಿಯವರು ಉಪಮುಖ್ಯಮಂತ್ರಿಯವರು ಎಲ್ಲರೂ ಸೇರಿ ಇದೊಂದು ವ್ಯವಸ್ಥೆ ನಡೆಯಲಿ, ಸಂಸದೀಯ ವ್ಯವಹಾರಗಳ ಸಚಿವರಾದ ಮಾನ್ಯ ಪ್ರಕಾಶ್‌ರವರಿದ್ದಾರೆ, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಹೆಸರು ಉಳಿಯತಕ್ಕದ್ದು, ನಾವು ಇಲ್ಲಿ ಎಷ್ಟೇ ಮಾತನಾಡಿ ಒಳ್ಳೊಳ್ಳೆಯ ಪದಗಳನ್ನು ಹೇಳಿ ಏನೇ ಮಾತನಾಡಬಹುದು, ಆದರೆ ಇವರ ಹೆಸರು ಉಳಿಯತಕ್ಕದ್ದು ಒಂದು, ಎರಡನೆಯದಾಗಿ ಇಂಥವರ ಮನೆಗಳಲ್ಲಿ ಅವರ ಜೀವನದ ಪ್ರಶ್ನೆ ಏನು, ಅವರ ಜೀವನ ಚೆನ್ನಾಗಿ ಇದೆಯೇ? ಹಸನಾಗಿದೆಯೆ? ಜೀವನ ನಡೆಸಲು ಸಾಧ್ಯವೇ? ಇದನ್ನೂ ಯೋಚನೆ ಮಾಡಿ ಅವರ ಪರಿಸ್ಥಿತಿ ಏನು? ಮಾನ್ಯ ಮಾಧುಸ್ವಾಮಿಯವರು ಕೆಲವು ವಿಷಯಗಳನ್ನು ಬಹಳ ಚೆನ್ನಾಗಿ ಹೇಳಿದರು. ನಾನು ಅವರ ಮಾತಿಗೆ ಬೆಂಬಲವನ್ನು ಕೊಡುತ್ತೇನೆ. ಇಂಥ ಅಮೂಲ್ಯವಾದಂಥ ಕೆಲಸವನ್ನು ನಾವು ಮಾಡಬೇಕಾಗಿರುವುದು ನಮ್ಮ ಕರ್ತವ್ಯ. ಆದ್ದರಿಂದ ದಯಮಾಡಿ ಇದಕ್ಕಾಗಿ ಒಂದು ಸಮಿತಿಯನ್ನು ರಚನೆ ಮಾಡಿ, ಸದನದ ಸಮಿತಿಯನ್ನು ತಾವು ರಚನೆ ಮಾಡಿ ಯಾರ್ಯಾರ ಬಗ್ಗೆ ಏನೇನು ಮಾಡಬೇಕು, ಸ್ಮಾರಕಗಳಾಗಬೇಕಾದರೆ ಈ ಸದನದಲ್ಲಿ ಕೆಲಸ ಮಾಡಿದಂಥ ಸದಸ್ಯರಾಗಿರಬಹುದು, ಅಧ್ಯಕ್ಷರಾಗಿರಬಹುದು, ಉಪಾಧ್ಯಕ್ಷರಾಗಿರಬಹುದು, ಸಚಿವರಾಗಿರಬಹುದು. ಇವತ್ತು ನನಗನ್ನಿಸುತ್ತದೆ, ಹೆಚ್. ಸಿದ್ಧವೀರಪ್ಪನವರು ಏನು ಕೆಲಸಗಳನ್ನು ಮಾಡಿದ್ದಾರೆಂದು, ಚೆನ್ನಬಸಪ್ಪನವರು ಟಿ. ಸುಬ್ರಮಣ್ಯ ರವರು ಯಾರು? ಇವತ್ತು ಅವರ ಹೆಸರುಗಳೇ ಇಲ್ಲ. ಶಾಂತವೇರಿ ಗೋಪಾಲಗೌಡರ ಹೆಸರನ್ನು ನಾನು ಬಹಳ ಕಷ್ಟಪಟ್ಟು ವಿಧಾನಸೌಧದ ಮುಂದಿನ ವೃತ್ತಕ್ಕೆ ಇಡದಿದ್ದರೆ, ಆವತ್ತು ಸರ್ಕಾರದವರು ಯಾರೂ ಇಲ್ಲ, ನಾನೇ ಅದಕ್ಕೆ ಒಂದು ನಾಮಫಲಕವನ್ನು ಹಾಕಿ ಇದು ಗೋಪಾಲಗೌಡರದ್ದು ಎಂದು ಹೇಳಿದೆ, ಆಗ ದೇವರಾಜ ಅರಸು, ಗುಂಡೂರಾವ್‌ರವರು ಎಲ್ಲರೂ ಇದ್ದರು, ನಗರಸಭೆಗೆ ಕೇಳಿ ಕೊನೆಗೆ ಅದನ್ನು ಅಂತಿಮವಾಗಿ ಒಪ್ಪಿಸಿದೆ, ಇಲ್ಲದಿದ್ದರೆ ಅಲ್ಲಿ ಅವರ ಹೆಸರು ಬರುತ್ತೀರಲಿಲ್ಲ, ಯಾರದ್ದೋ ಒಬ್ಬರ ಹೆಸರು ಬರುತ್ತಿತ್ತು. ಶಾಂತವೇರಿ ಗೋಪಾಲಗೌಡರ ಹೆಸರು ಅಲ್ಲಿ ಬರಬೇಕಾದರೆ ಅದಕ್ಕೆ ನಾನು ಕಷ್ಟಪಡಬೇಕಾಯಿತು. ತಮಗೆ ಏಕೆ ಹೇಳುತ್ತಿದ್ದೇನೆಂದರೆ, ಎಂ.ಎಸ್. ಕೃಷ್ಣನ್‌ರವರು, ಏನು ಕ್ರಾಂತಿಕಾರಕವಾಗಿ ಕೆಲಸ ಮಾಡಿರತಕ್ಕವರು, ಒಬ್ಬ ದೊಡ್ಡ ಹೋರಾಟಗಾರರು, ಫಸ್ಟ್ ಜನಸಂಘದ ಶೆಟ್ಟರ್‌ರವರು ಬಂದಿದ್ದೀರಿ, ಇವತ್ತು 72 ಜನರಿದ್ದಾರೆ, ಆವಾಗ ಜನಸಂಘದ ಶೆಟ್ಟರ್. ಈ ರೀತಿ ಅನೇಕರು ಈ ಸದನದ ಸದಸ್ಯರಾಗಿದ್ದವರು, ಸಾಹುಕಾರ್ ಚೆನ್ನಯ್ಯನವರು, ಇವತ್ತು ಸಾಹುಕಾರ್ ಚೆನ್ನಯ್ಯನವರ ಬಗ್ಗೆ ಬೇರೆ ಏನು ಮಾಡಿದ್ದೇವೆ? ಈ ರೀತಿ ಅನೇಕರು, ಸಾಹುಕಾರ್ ಚೆನ್ನಯ್ಯನವರು,

ಕೊಠಾವಳಿಯವರು, ವೈಕುಂಠಬಾಳಿಗಾರವರು, ಇವರದ್ದು ಏನಿದೆ? ಯಾವುದೇ ಆಧಾರಗಳು ಇಲ್ಲ. ಎಲ್ಲೋ ಒಂದು ಕಡೆ ನಾವು ಈ ರೀತಿ ಸಂದರ್ಭ ಬಂದಾಗ ಮಾತ್ರ ನೆನಪಿಸಿಕೊಳ್ಳುತ್ತೇವೆ. ಇದನ್ನೆಲ್ಲಾ ಉಳಿಸುವುದಕ್ಕೆ ಒಂದು ದೊಡ್ಡ ಸ್ಮಾರಕ ಭವನ, ಇತಿಹಾಸ ಚರಿತ್ರೆಯಲ್ಲಿ ಉಳಿಯುತ್ತದೆ. ಒಂದು ದೊಡ್ಡ ಸ್ಮಾರಕ ಭವನ, ಅದಕ್ಕಾಗಿ ತಾವು ತಮ್ಮ ಕಾಲದಲ್ಲಿ ಒಂದು ಸದನದ ಸಮಿತಿಯನ್ನು ತಾವು ನೇಮಕ ಮಾಡಿ. ಇದರಿಂದ ತಮಗೂ ಕೀರ್ತಿ ಬರುತ್ತದೆ. ಎಲ್ಲಿ ಇದನ್ನು ಮಾಡಬೇಕೆಂದು ತಕ್ಷಣ ಒಂದೆರಡು ತಿಂಗಳಿನಲ್ಲಿ ವರದಿಯನ್ನು ತರಿಸಿಕೊಂಡು ಮಾಡಿ, ಎಸ್. ಶಿವಪ್ಪನವರು, ಇವತ್ತು ಒಂದು ಆದರ್ಶವಾದಂಥ ಕೆಲಸವನ್ನು ಮಾಡಿದ್ದಾರೆ. ಅವರ ಜೊತೆಯಲ್ಲಿ ಮಂಜುನಾಥ್‌ರವರು ಉಪಾಧ್ಯಕ್ಷರಾಗಿದ್ದರು, ಎಸ್. ಶಿವಪ್ಪನವರ ಒಂದು ಸಣ್ಣ ಹೆಸರು ಎಲ್ಲೂ ಇಲ್ಲ. ಬಹುಶಃ ನನ್ನ ಪ್ರಕಾರ ಸುಮಾರು 20 ವರ್ಷ ವಿರೋಧ ಪಕ್ಷದ ನಾಯಕರಾಗಿ ಅವರು ಕೆಲಸ ಮಾಡಿದ್ದಾರೆ. ಅನಂತರ ಮುಲ್ಕಾಗೋವಿಂದರೆಡ್ಡಿಯವರು, ಗುರುಪಾದಸ್ವಾಮಿ ಇವರೆಲ್ಲಾ ಎಂತೆಂಥ ಜನರು, ಇವರುಗಳ ಬಗ್ಗೆ ಒಂದು ಇತಿಹಾಸವನ್ನು ಹೇಳತಕ್ಕಂಥ, ಒಂದು ಚರಿತ್ರೆಯನ್ನು ನೀಡತಕ್ಕಂಥ ವ್ಯವಸ್ಥೆಯಾನ ಬೇಕು ಅದ್ದರಿಂದ ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುತ್ತೇನೆ, ತಾವು ತಕ್ಷಣ ಈ ಕಾರ್ಯವನ್ನು ಮಾಡಿ ಕನಿಷ್ಟ ಒಂದು ಕಾರ್ಯಕ್ರಮವನ್ನು ಮಾಡಬೇಕು. ಮಾನ್ಯ ಮಾಧುಸ್ವಾಮಿಯವರು ಹೇಳಿದರು, ನಮ್ಮಲ್ಲಿ ಅಂಜಪ್ಪ ಎಂಬ ಒಬ್ಬರು ಎಂಎಲ್‌ಎ ಆಗಿದ್ದರು. ಬಹುಶಃ ಇವತ್ತು ಅವರ ಮನೆತನ ಅವರ ಜೀವನವನ್ನು ನೋಡಿದರೆ ಕಣ್ಣೀರಿನ ಕತೆ. ಇಂಥ ಅನೇಕ ಮಾಜಿ ಶಾಸಕರುಗಳು, ಮಾಜಿ ಮಂತ್ರಿಗಳು ಇದ್ದಾರೆ. ಆದ್ದರಿಂದ ದಯಮಾಡಿ ಈ ಬಗ್ಗೆ ಕಾಳಜಿ ವಹಿಸಿ ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಗಮನಹರಿಸಬೇಕೆಂದು ಕೋರುತ್ತೇನೆ. ನಮ್ಮಲ್ಲಿ ಕೊಠಾವಳಿ ಎಂಥ ದೊಡ್ಡ ಅಧ್ಯಕ್ಷರಾಗಿದ್ದರು. ಅನಂತ ನಾಗಪ್ಪನವರು, ಅವರು ಇವತ್ತು ಇದ್ದಾರೆ, ರಾಯಚೂರಿನ ನಾಗಪ್ಪನವರು, ಅವರು ಇವತ್ತು ಇದ್ದಾರೆ, ರಾಯಚೂರಿನ ನಾಗಪ್ಪನವರು, ಬಹುಶಃ ಶಾಸಕಾಂಗದಲ್ಲಿ ಅತ್ಯುನ್ನತವಾದಂಥ ಹೆಸರನ್ನು ಪಡೆದಂಥವರು ರಾಯಚೂರಿನ ಎಂ. ನಾಗಪ್ಪನವರು. ಇಂಥ ಅನೇಕರು ಇಲ್ಲಿ ಇದ್ದಾರೆ, ಮತ್ತು ಅಗಲಿರತಕ್ಕವರು ಇದ್ದಾರೆ, ಇವರನ್ನೆಲ್ಲಾ ಸೇರಿಸಿ ಒಂದು ಉತ್ತಮವಾದಂಥ ಸ್ಮಾರಕ ನಿರ್ಮಾಣ ಆಗಲೇ ಬೇಕು, ನಿಮ್ಮ ಕಾಲದಲ್ಲಿ ಇದು ಪ್ರಾರಂಭವಾಗುತ್ತದೆಂದು ನಾನು ನಂಬಿಕೊಂಡಿದ್ದೇನೆ, ದಯಮಾಡಿ ತಾವು ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಯವರು, ಸಂಸದೀಯ ವ್ಯವಹಾರಗಳ ಸಚಿವರು ವಿರೋಧ ಪಕ್ಷದ ನಾಯಕರೆಲ್ಲಾ ಕುಳಿತು ಒಂದು ಚರ್ಚೆ ಮಾಡಿ ಒಂದು ಅಂಕಿತವನ್ನು ತಾವು ಹಾಕಬೇಕೆಂದು ಹೇಳಿ ಇವರೆಲ್ಲರ ಆತ್ಮಕ್ಕೂ ನಾನು ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಜಿ.ಎ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕಂಥ ಸಂತಾಪಸೂಚನೆಗೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಿದ್ದೆನೆ. ತಾವೇನು ಮಂಡಿಸಿದ್ದೀರಿ ಅದರಲ್ಲಿ ಮೂರು ಜನರ ಬಗ್ಗೆ ನನಗೆ ವೈಯಕ್ತಿಕವಾಗಿ ಪರಿಚಯವಿಲ್ಲ, ಆದರೂ ಕೂಡ ಅವರು ಈ ರಾಜ್ಯದ ಜನರ ಸೇವೆ ಮಾಡಿರತಕ್ಕಂಥವರು. ಅದರಲ್ಲಿ ಬಹಳ ಮುಖ್ಯವಾಗಿ ಕಲ್ಮಣ್‌ಕರ್‌ರವರು, ನಾನು 1994ರಲ್ಲಿ ಶಾಸಕನಾಗಿದ್ದಂಥ ಸಂದರ್ಭದಲ್ಲಿ ಅವರನ್ನು ನಾನು ಮೊಟ್ಟಮೊದಲು ನೋಡಿದ್ದೆ, ಆದರೆ ಅವರ ಬಗ್ಗೆ ಬಾರಿ ಒಳ್ಳೆಯ ಇತಿಹಾಸ ಇದೆ. ಬಾರಿ ಪ್ರಮುಖವಾದಂಥ ಇತಿಹಾಸ

ಹೈದ್ರಾಬಾದ್‌ನಿಜಾಮನ ರಜಾಕಾರರ ವಿರುದ್ಧ ಉತ್ತರ ಕರ್ನಾಟಕದಲ್ಲಿ ನಡೆದಂಥ ಐತಿಹಾಸಿಕ ಹೋರಾಟದಲ್ಲಿ ಅವರು ಭಾಗವಹಿಸಿದ್ದಂಥದ್ದು. ಅದು ಸಾಮಾನ್ಯವಾದಂಥ ಹೋರಾಟವಲ್ಲ, ಏಕೆಂದರೆ, ಮೇಲುನೋಟದಲ್ಲಿ ಅದೊಂದು ಸ್ವಾತಂತ್ರ್ಯ ರಾಜ್ಯಕ್ಕಾಗಿ ನಡೆದಂಥ ಹೋರಾಟವೆಂದು ಇರಬಹುದು. ಆದರೆ ಅದರ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದಾಗ ಇಡೀ ಭಾರತ ದೇಶದ ಪ್ರಜಾಪ್ರಭುತ್ವದ ಅಡಿಗಲ್ಲನ್ನು ಹಾಕುವುದಕ್ಕೆ ನಡೆದಂಥ ಹೋರಾಟ ಅದು. ಏಕೆಂದರೆ ರಾಜಮಹಾರಾಜರು ನಾವು ಪ್ರತ್ಯೇಕವಾಗಿ ಇರುತ್ತೇವೆ ಎಂದು ಸ್ವಾತಂತ್ರ್ಯ ಬಂದ ಮೇಲೆ ಅವರಷ್ಟಕ್ಕೆ ಘೋಷಿಸಿಕೊಂಡವರು. ಅದನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಹೈದ್ರಾಬಾದ್‌ನ ನಿಜಾಮ ಮಾಡಿದಂಥ ಪಿತೂರಿಯ ಭಾಗ ಅದು, ರಜಾಕಾರರನ್ನು ಸೃಷ್ಟಿ ಮಾಡಿ ಗಲಭೆಗಳನ್ನು ಇಡೀ ದಕ್ಷಿಣ ಭಾರತದಲ್ಲಿ ಎಬ್ಬಿಸಿದಂಥ ಸಂದರ್ಭದಲ್ಲಿ ಅದರ ವಿರುದ್ಧ ಹೋರಾಟ ನಡೆಸಿದಂಥ ಪ್ರಮುಖರಲ್ಲಿ ಕಲ್ಲಣ್ಣಕರವರು ಒಬ್ಬರು. ಅಂಥ ಐತಿಹಾಸಿಕವಾದಂಥ ಹೋರಾಟದಲ್ಲಿ ಭಾಗವಹಿಸತಕ್ಕದ್ದೇ ಹೆಮ್ಮೆಯ ವಿಷಯ. ಅಂಥ ಹೋರಾಟದಲ್ಲಿ ಬೆಳೆದು ಬಂದಂಥ ನಾಯಕರು. ಅವರು ವಯಸ್ಸಾದಷ್ಟು ಬಹಳ ಉತ್ಸಾಹಿಗಳಾಗಿದ್ದರು. ನಮ್ಮ ಜೊತೆ ಅವರು ವಿದೇಶಕ್ಕೆ ಬಂದಿದ್ದರು. ಅವರು ಜೊತೆಯಲ್ಲಿ ಇದ್ದಷ್ಟು ದಿವಸ ನಾವು ಹೇಗೆ ಸಮಯವನ್ನು ಕಳೆದೆವು ಎಂಬುದೇ ಗೊತ್ತಾಗಲಿಲ್ಲ. ಅಷ್ಟೊಂದು ತಮಾಷೆಯಾಗಿ ನಮ್ಮ ಜೊತೆ ವಯಸ್ಸಾಗಿದ್ದರೂ ಇರುತ್ತಿದ್ದರು. ಆ ರೀತಿಯಾದಂಥ ಹುರುಪು ಮತ್ತು ಉತ್ಸಾಹ ವಯಸ್ಸಾದವರಲ್ಲಿ ಕಾಣುವಂಥದ್ದು ಬಹಳ ಅಪರೂಪ. ಹಾಗಾಗಿ ಅವರು ನಮ್ಮ ರಾಜ್ಯಕ್ಕೆ ಸಲ್ಲಿಸಿರತಕ್ಕಂಥ ಸೇವೆ ಮತ್ತು ಹೈದ್ರಾಬಾದ್‌ನ ನಿಜಾಮನ ರಜಾಕಾರನ ವಿರುದ್ಧ ನಡೆಸಿದಂಥ ಹೋರಾಟ, ಹೈದ್ರಾಬಾದ್ ಕರ್ನಾಟಕವನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ನಡೆಸಿದಂಥ ಹೋರಾಟದಲ್ಲಿ ಭಾಗವಹಿಸಿದ್ದಾರೆ. ಅವರಿಗೆ ಮತ್ತು ಉಳಿದ ಎಲ್ಲರಿಗೂ ಸಂತಾಪವನ್ನು ಸಲ್ಲಿಸುತ್ತಿದ್ದೇವೆ. ನಮ್ಮ ಸ್ನೇಹಿತರಾದ ವಾಟಾಳ್‌ನಾಗರಾಜ್‌ರವರು ಹೇಳಿದಂತೆ, ಐತಿಹಾಸಿಕ ಹೋರಾಟದಲ್ಲಿ ಭಾಗವಹಿಸಿದಂಥ ಮುಖಂಡರುಗಳಿಗೆ ಅವರ ಕನಿಷ್ಟ ಇತಿಹಾಸದಲ್ಲಿ ಅವರನ್ನು ನೆನಸಿಕೊಳ್ಳುವ ರೀತಿಯಲ್ಲಿ ನಾವು ಏನಾದರು ಮಾಡಬೇಕು, ಏಕೆಂದರೆ ಇತಿಹಾಸದ ಬಗ್ಗೆ ತಿಳುವಳಿಕೆ ಇರತಕ್ಕವರ ಜನರ ಸಂಖ್ಯೆ ಕಡಿಮೆಯಾಗುತ್ತಿದೆ. ನಮ್ಮ ದೇಶದ ಘಟನಾವಳಿಗಳು, ಐತಿಹಾಸಿಕವಾದಂಥ ಹೋರಾಟದ ಬಗ್ಗೆ ತಿಳುವಳಿಕೆ ಇರತಕ್ಕವರ ಜನರ ಸಂಖ್ಯೆ ಕಡಿಮೆಯಾಗುತ್ತಿದೆ. ಹಿಂದಿನ ಪರಂಪರೆ, ಹೋರಾಟದ ಪರಂಪರೆ, ನಮ್ಮ ದೇಶದ ಪರಂಪರೆಯನ್ನು ತಿಳಿಯತಕ್ಕಂಥ ಸರಿಯಾದ ವೈಜ್ಞಾನಿಕವಾದಂಥ ವ್ಯವಸ್ಥೆ ಈ ದೇಶದಲ್ಲಿ ಇಲ್ಲ. ಒಂದು ಕಡೆ ತಪ್ಪು ತಿಳುವಳಿಕೆಯಾದರೂ ಕೊಟ್ಟಿರುತ್ತೇವೆ, ಇನ್ನೊಂದು ಕಡೆ ಸಕಾರಾತ್ಮಕ, ನಕಾರಾತ್ಮಕ ತಿಳುವಳಿಕೆಗಳು ಹೆಚ್ಚಾಗಿರತಕ್ಕ ಸಂದರ್ಭದಲ್ಲಿ ವೈಜ್ಞಾನಿಕವಾದಂಥ ತಿಳುವಳಿಕೆಯನ್ನು ಇತಿಹಾಸದ ಬಗ್ಗೆ ಪಡೆಯತಕ್ಕಂಥ ಕೆಲವು ಐತಿಹಾಸಿಕ ಹೋರಾಟಗಳಲ್ಲಿ ಭಾಗವಹಿಸತಕ್ಕಂಥ ಮುಖಂಡರುಗಳ ಬಗ್ಗೆ ಕನಿಷ್ಟ ದಾಖಲೆಗಳನ್ನಾದರೂ ನಾವು ಶೇಖರಣೆ ಮಾಡಿ ಇಡತಕ್ಕಂಥ ಕರ್ತವ್ಯ ನಮ್ಮ ಮೇಲಿದೆ. ಅದನ್ನು ದಯವಿಟ್ಟು ಮಾಡಲು ಪ್ರಯತ್ನ ಮಾಡಬೇಕೆಂದು ವಿನಂತಿಸಿ ನಾನು ಇವರೆಲ್ಲರಿಗೂ ಸಂತಾಪವನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಮೃತರ ಗೌರವಾರ್ಥ ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿತು)

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

3. (i) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ವಿರೋಧ ಪಕ್ಷಗಳ ಮುಖಂಡರ ಸಭೆಗೆ ವಿಧಾನ ಸಭೆಯ ನಾಯಕರುಗಳು ಹಾಗೂ ಪಕ್ಷೇತರ ಸದಸ್ಯರುಗಳನ್ನು ಆಹ್ವಾನಿಸದಿರುವ ಬಗ್ಗೆ

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಮಾನ್ಯ ಅಧ್ಯಕ್ಷರೇ, ನೀವು ಮೊನ್ನೆ ವಿರೋಧ ಪಕ್ಷಗಳ ಮುಖಂಡರುಗಳ ಸಭೆಯೊಂದನ್ನು ಕರೆದಿದ್ದಿರಿ. ಆದರೆ ನನ್ನನ್ನು ಜೆ.ಡಿ. (ಯು) ಪಕ್ಷದವರನ್ನು ಹಾಗೂ ಕನ್ನಡ ಚಳುವಳಿ ವಾಟಾಳ್ ಪಕ್ಷದ ವಾಟಾಳ್ ನಾಗರಾಜ್‌ರವರು ಸೇರಿದಂತೆ ನಮ್ಮನ್ಯಾರನ್ನೂ ಕೂಡ ತಾವು ಆ ಸಭೆಗೆ ಕರೆದಿರಲಿಲ್ಲ.

ಅಧ್ಯಕ್ಷರು:– ತಮಗೆ ಈ ಮಾಹಿತಿಯನ್ನು ಕೊಟ್ಟವರು ಯಾರು ಸ್ವಾಮಿ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾಹಿತಿ ನಿಮ್ಮ ಹತ್ತಿರವೇ ಇರಬೇಕಲ್ಲಾ?

ಅಧ್ಯಕ್ಷರು:– ನಾನು ಯಾವ ಸಭೆಯನ್ನೂ ಕರೆದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಯಾವ್ಯಾವ ಪಕ್ಷಗಳಿಂದ ಯಾರ್ಯಾರು ಆಯ್ಕೆಯಾಗಿದ್ದಾರೆಂಬ ಮಾಹಿತಿಯನ್ನು ಚುನಾವಣಾ ಆಯೋಗದವರು ಫಲಿತಾಂಶ ಪ್ರಕಟಿಸಿದಾಗ ತಮಗೆ ನೀಡಿದ್ದಾರೆ. 15ನೇ ತಾರೀಖಿನಂದೇ ಚುನಾವಣಾ ಕಮೀಷನರ್‌ರವರು ನೋಟಿಫಿಕೇಷನ್ ಮೂಲಕ ತಮಗೆ ಮಾಹಿತಿಯನ್ನು ತಲುಪಿಸಿದ್ದಾರೆ. ಅದರಲ್ಲಿ ಯಾವ್ಯಾವ ಪಕ್ಷಗಳಿಂದ ಯಾರ್ಯಾರು ಆಯ್ಕೆಯಾಗಿದ್ದಾರೆ ಎಂಬ ಬಗ್ಗೆ ಸ್ಪಷ್ಟವಾದ ಮಾಹಿತಿ ಇದೆ. ಆ ಪಟ್ಟಿಯನ್ನು ತಾವೇ ಇಟ್ಟುಕೊಂಡಿದ್ದೀರಿ. ಅದೇ ನಿಮಗೆ ಮಾಹಿತಿ. ಅದು ಬಿಟ್ಟು ಬೇರೆ ನಿಮಗೆ ಯಾವ ಮಾಹಿತಿ ಬೇಕು? ಆ ತರಹದ ಮಾಹಿತಿ ನಿಮ್ಮ ಬಳಿ ಇದ್ದಂತಹ ಸಂದರ್ಭದಲ್ಲಿ ನೀವು....

ಅಧ್ಯಕ್ಷರು:– ಮಾನ್ಯ ಸದಸ್ಯರಿಗೆ ನಾನು ಹೇಳುವುದೇನೆಂದರೆ....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– .... ನೀವು ಬಿ.ಜೆ.ಪಿ. ಯವರನ್ನು ಮಾತ್ರ ಕರೆದಿದ್ದೀರಿ. ಅವರಲ್ಲದೆ ಸದನದಲ್ಲಿ ಜೆ.ಡಿ. (ಯು) ನವರು ಇದ್ದಾರೆ. ಶ್ರೀ ವಾಟಾಳ್‌ರವರು ಇದ್ದಾರೆ, ಅವರ ಜೊತೆಗೆ ನಾನೂ ಸಹಾ ಇದ್ದೇನೆ. ಆದರೆ ನಮ್ಮನ್ಯಾರನ್ನೂ ಸಹ ಕರೆಯದೇ ನೀವೊಂದು ಸಭೆಯನ್ನು ಮಾಡಿ ಬಿಟ್ಟಿದ್ದೀರಿ. ನಮ್ಮನ್ನು ನೀವು ಯಾವ ಲೆಕ್ಕಕ್ಕೆ ಸೇರಿಸಿದ್ದೀರಿ ಎಂದಾದರೂ ನಮಗೆ ಗೊತ್ತಾಗಬೇಕಲ್ಲವೇ?

ಅಧ್ಯಕ್ಷರು:– ಮಾನ್ಯ ಸದಸ್ಯರಿಗೆ ನಾನು ತಿಳಿಸುವುದೇನೆಂದರೆ, ನಾನು ಯಾವ ಸಭೆಯನ್ನೂ ಕರೆದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಆದರೆ ಆ ಬಗ್ಗೆ ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ಆ ಬಗ್ಗೆ ಪತ್ರಿಕೆಗಳಲ್ಲಿ ಹಾಗೂ ಟಿ.ವಿ. ಮಾಧ್ಯಮಗಳಲ್ಲಿ ಬಂದಿದೆ. ಮಾನ್ಯ ಅಧ್ಯಕ್ಷರು ವಿರೋಧ ಪಕ್ಷಗಳ ಮುಖಂಡರುಗಳ ಸಭೆಯೊಂದನ್ನು ಕರೆದಿದ್ದರು. ಅದರಲ್ಲಿ ಮಾನ್ಯ ಅಧ್ಯಕ್ಷರಾದ ತಾವು ಮಾನ್ಯ ಮುಖ್ಯಮಂತ್ರಿಗಳು,